ನಮ್ಮ ಜನ
NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ – 01 ಸಂಚಿಕೆ – 23 ಶೀರ್ಷಿಕೆ ಕೋಡ್: ಕೆಎಆರ್ ಕೆಎನ್ 28269 ಚಿತ್ರದುರ್ಗ ದಿನಾಂಕ: 26–07–2023 ಬುಧವಾರ ಪುಟ: 4 ಬೆಲೆ : ರೂ.2–00
Volume - 01 Issue - 23 Title- Code: KARKAN 28269 Chitradurga Date: 26-07-2023 Wednesday Page: 4 Price: Rs. 2-00

ಒಳಪುಟದ ಸುದ್ದಿಗಳು
ಅಂಬೇಡ್ಕರ್ ಒಂದು ಜಾತಿಗೆ ಸೀಮಿತ ಮಾಡಬೇಡಿ: ಷಡಕ್ಷರಿಮುನಿ ಸ್ವಾಮೀಜಿ 2
ಗ್ರಾಹಕರ ಸಹಕಾರವೇ ಶ್ರೀರಕ್ಷೆ: ರಾಜ್ಯ ಯೋಜನೆ ಮತ್ತು ಸಾಂಖಿಕ ಸಚಿವರಾದ ಡಿ.ಸುಧಾಕರ್ 3
ರಾಜ್ಯದಲ್ಲಿ ಹೆಚ್ಚಿದ ಮದ್ರಾಸ್ ಐ ಕಾಟ ಮಕ್ಕಳೇ ಟಾರ್ಗೆಟ್ 4

ಫಾಸ್ಟ್ ನ್ಯೂಸ್

ಪ್ರತಿ ಗ್ರಾಮ ಪಂಚಾಯತಿ ಒಂದರಂತೆ ಸಹಕಾರಿ ಸಂಘ ಸ್ಥಾಪನೆ

» ತುಮಕೂರು

ರಾಜ್ಯದಲ್ಲಿ ಡಿಸೆಂಬರ್ ಅಂತ್ಯದೊಳಗೆ ಪ್ರತಿ ಗ್ರಾಮ ಪಂಚಾಯ್ತಿಗೆ ಒಂದರಂತೆ ಪತ್ತಿನ ಸಹಕಾರ ಸಂಘ ಪ್ರಾರಂಭಿಸುವುದಾಗಿ ಸಹಕಾರ ಸಚಿವ ಕೆ ಎನ್ ರಾಜಣ್ಣ ತಿಳಿಸಿದ್ದಾರೆ. ಈ ಮೂಲಕ ಗ್ರಾಮೀಣ ಜನತೆಗೆ ಗುಡ್ ನ್ಯೂಸ್ ನೀಡಿದ್ದಾರೆ. ನಗರದಲ್ಲಿ ಮಾತನಾಡಿದಂತ ಅವರು, ಸಹಕಾರಿ ಕ್ಷೇತ್ರವು ಜನಪರ ಆಂದೋಲನ ಮಾಡುತ್ತಿದೆ. ಶಾಸಕ ಸ್ಥಾನಕ್ಕಿಂತ ಸಹಕಾರಿ ಸ್ಥಾನವೇ ಮುಖ್ಯವಾಗಿದೆ ಎಂದರು. ಗದುಗಿನ ಎಸ್ ಎಸ್ ಪಾಟೀಲ್ ಅವರು 1904ರಲ್ಲಿ ಪ್ರಾರಂಭ ಮಾಡಿದ ಈ ಸಹಕಾರ ಕ್ಷೇತ್ರ, ಈಗ ಶಕ್ತಿಯುತವಾಗಿದೆ. ರೈತರು ಕೃಷಿಯೊಂದಿಗೆ ಹೈನುಗಾರಿಕೆಯಂತಹ ಉಪ ಕಸುಬನ್ನು ರೂಢಿ ಮಾಡಿಕೊಳ್ಳುವ ಮೂಲಕ ಆರ್ಥಿಕ ಪ್ರಗತಿ ಕಾಣಬೇಕಾಗಿದೆ ಎಂದು ತಿಳಿಸಿದರು.

ಸಚಿವರ ಕಾರ್ಯ ವೈಖರಿಗೆ ಕಾಂಗ್ರೆಸ್ ಶಾಸಕರ ಅಸಮಾಧಾನ

» ಬೆಂಗಳೂರು

ಸಚಿವರ ಕಾರ್ಯ ವೈಖರಿಗೆ ಕಾಂಗ್ರೆಸ್ ಶಾಸಕರು ಅಸಮಾಧಾನಗೊಂಡಿದ್ದು, ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಗಾಗಿ ಕಾಯುತ್ತಿದ್ದಾರೆ. ಜುಲೈ 27ರಂದು ಬೆಂಗಳೂರಿನ ಅರಮನೆ ರಸ್ತೆಯ ಖಾಸಗಿ ಹೋಟೆಲ್‌ನಲ್ಲಿ ನಡೆಯಲಿರುವ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ನಡೆಯಲಿದೆ. ಈ ಹಿನ್ನಲೆ ಇತ್ತ ಹರಿಪ್ರಸಾದ್ ದೆಹಲಿ ಪ್ರವಾಸ ರದ್ದುಗೊಳಿಸಿದ್ದಾರೆ. ಸಚಿವರ ಕಾರ್ಯವೈಖರಿ ಬಗ್ಗೆ 30ಕ್ಕೂ ಹೆಚ್ಚು ಹಿರಿಯ ಶಾಸಕರು ಬೇಸರ ವ್ಯಕ್ತಪಡಿಸಿದ್ದಾರೆ.

ವಿಪಕ್ಷ ನಾಯಕನಿಲ್ಲದಿದ್ದರೂ ಬಿಜೆಪಿ ರಾಜ್ಯ ಪ್ರವಾಸ

» ಬೆಂಗಳೂರು

ವಿಪಕ್ಷ ನಾಯಕನಿಲ್ಲದಿದ್ದರೂ ಬಿಜೆಪಿ ರಾಜ್ಯ ಪ್ರವಾಸಕ್ಕೆ ಮುಂದಾಗಿದೆ. ಬರ, ನೆರೆ ಬಗ್ಗೆ ವರದಿ ಸಲ್ಲಿಸಲು ಪ್ರತ್ಯೇಕ ತಂಡಗಳಾಗಿ ಪ್ರವಾಸಕ್ಕೆ ಬಿಜೆಪಿ ನಿರ್ಧಾರ ಮಾಡಿದೆ. ಸಿಎಂ, ಸಚಿವರು ಪ್ರವಾಸಕ್ಕೂ ಮುನ್ನ ರಾಜ್ಯಮಟ್ಟದ ಪದಾಧಿಕಾರಿಗಳ ತಂಡದಿಂದ ನೆರೆ ಕುರಿತು ಪ್ರವಾಸ ಮಾಡಲಿದ್ದಾರೆ. ಈ ಕುರಿತು ಬಿಜೆಪಿ ರಾಜ್ಯಾಧ್ಯಕ್ಷರಿಗೆ ಅಧ್ಯಯನದ ವರದಿ ಸಲ್ಲಿಸಲಿದೆ.

ಜನರ ಆರೋಗ್ಯ ಕಾಪಾಡಲು ಖರೀದಿಸಿದ ಲಕ್ಷಾಂತರ ರೂಪಾಯಿ ಮಾತ್ರೆ ಬೀದಿಪಾಲು!

» ಚಿತ್ರದುರ್ಗ

ಅವಧಿ ಮೀರಿದ ಔಷಧಿ ಅಥವಾ ಮಾತ್ರೆಗಳನ್ನು ಬಿಸಾಡುವುದು ಸಹಜ. ಆದರೆ ಅವಧಿ ಮೀರದ ಮಾತ್ರೆಗಳನ್ನು ಹೆದ್ದಾರಿ ಪಕ್ಕದ ಸರ್ವಿಸ್ ರಸ್ತೆಯಲ್ಲಿ ಎಸೆದಿರುವುದು ಬೆಳಕಿಗೆ ಬಂದಿದೆ. ಇದು ಸರ್ಕಾರ ಬಡವರಿಗೆ ನೀಡುವ ಮಾತ್ರೆಗಳು. ಬಡವರ ಆರೋಗ್ಯ ಕಾಪಾಡಲು ಸರ್ಕಾರ ಖರೀದಿ ಮಾಡಿ ಕಳಿಸಿರುವ ಮಾತ್ರೆಗಳನ್ನು ಏಕೆ ಬಿಸಡಲಾಗಿದೆ ಎಂಬುದಕ್ಕೆ ಕಾರಣ ಸಿಗುತ್ತಿಲ್ಲ.

ನಗರದ ಪ್ರಾದೇಶಿಕ ಸಾರಿಗೆ ಕಚೇರಿ ಸಮೀಪದ ರಾಷ್ಟ್ರೀಯ ಹೆದ್ದಾರಿ ನಾಲ್ಕರ ಸರ್ವಿಸ್ ರಸ್ತೆಯಲ್ಲಿ ಲಕ್ಷಾಂತರ ರೂಪಾಯಿ ಮಾತ್ರೆಗಳನ್ನು ಎಸೆಯಲಾಗಿದೆ.

ಸಿಟ್ರಿಜಿನ್ ಮಾತ್ರೆ, ಶೀತ, ಕೆಮ್ಮು ಹಾಗು ಅಲರ್ಜಿಗೆ ಕೊಡುವ ಟಾಬ್ಲೆಟ್. ಕಳೆದ ಕೆಲವು ದಿನಗಳಿಂದ ಮಳೆ ಗಾಳಿ ವಿಪರೀತವಾಗಿದ್ದು ಶೀತ ಕೆಮ್ಮುನಿಂದ ಬಳಲುವರೇ ಹೆಚ್ಚು. ಇಂತಹ ಸಮಯದಲ್ಲಿ ಅವಧಿ ಮೀರದಿದ್ದರೂ ಈ ಟಾಬ್ಲೆಟ್‌ಗಳನ್ನು ಏಕೆ ಬಿಸಾಡಲಾಗಿದೆ ಎಂಬುದಕ್ಕೆ ಕಾರಣ ಸಿಗುತ್ತಿಲ್ಲ.

ಸಿಟ್ರಿಜನ್ ಮಾತ್ರೆ ಮೇಲೆ ಕರ್ನಾಟಕ ಸರ್ಕಾರ. ನಾಟ್ ಫಾರ್ ಸೆಲ್ ಅಂತ ಇದೆ. ಇದನ್ನು ಬಿಡಿ ಈ ಟಾಬ್ಲೆಟ್‌ಗಳ ಅವಧಿ 2024 ರವರಗೆ ಇದೆ. ಈಗ 2023 ಇನ್ನೂ ಒಂದು ವರ್ಷ ಇದ್ದರೂ ಏಕೆ ಬಿಸಾಡಲಾಗಿದೆ ಎನ್ನುವುದು ತನಿಖೆಯಿಂದ ಗೊತ್ತಾಗಬೇಕು.

ಸರ್ಕಾರಕ್ಕೆ ಸೇರಿದ ಮಾತ್ರೆಗಳನ್ನು ಬೇರೆ ಕಡೆ ಸಾಗಾಣೆ ಮಾಡಲಾಗುತಿತ್ತೆ? ಇಲ್ಲವೆ ಸ್ಟಾಕ್ ಇರುವ ಮಾತ್ರೆಗಳನ್ನು ಬಿಸಾಡಿ ಮತ್ತೆ ಖರೀದಿಸಿ ತಯಾರಕರು ಅಥವಾ ಸರಬರಾಜು ಮಾಡುವರಿಗೆ ಅನುಕೂಲ ಮಾಡಿಕೊಡಲು ಈ ರೀತಿ ಮಾಡಲಾಗಿದೆಯೇ ಎಂಬ ಪ್ರಶ್ನೆಗಳಿಗೆ ಉತ್ತರ ಸಿಗುತ್ತಿಲ್ಲ.

ಈ ಹಿಂದೊಮ್ಮೆ ಅವಧಿ ಮೀರಿದ ಮಾತ್ರೆಗಳನ್ನು ಬಿಸಾಡಲಾಗಿತ್ತು. ಅವಧಿ ಮೀರಿದ ಮಾತ್ರೆಗಳನ್ನು ನೀತಿ ನಿಯಮದ ಪ್ರಕಾರ ಜನರು ವಾಸ ಮಾಡದ ಪ್ರದೇಶಗಳಲ್ಲಿ ಗುಂಡಿ ತೆಗೆದು ಮಾತ್ರೆಗಳನ್ನು ಇಟ್ಟು ಮುಚ್ಚಬೇಕು. ಅಲ್ಲದೆ ಇದಕ್ಕೆಂದೆ ಒಂದು ಕಮಿಟಿ ಇದೆ. ಕಮಿಟಿಯಲ್ಲಿ ಸಮಾಲೋಚನೆ ಮಾಡಿ ನಂತರ ಮಾತ್ರೆಗಳನ್ನು ಗುಂಡಿಯಲ್ಲಿ ಇಟ್ಟು ಮಣ್ಣು ಮುಚ್ಚಬೇಕೆಂಬ ನಿಯಮಇದೆ.

ಇದು ಅವಧಿ ಮೀರಿದ ಮಾತ್ರೆ ಔಷಧಿಗಳನ್ನು ಡಿಸ್‌ಪೋಸ್ ಮಾಡಬೇಕಾದ ನಿಯಮ. ಆದರೆ ಅವಧಿ ಮೀರದ ಮಾತ್ರೆಗಳನ್ನು ಬಿಸಾಡುವಂತಿಲ್ಲ. ಏನೋ ಒಂದು ಶೀಟ್ ಅಥವಾ ಎರಡು ಶೀಟ್ ಎಂದರೆ ಪರವಾಗಿಲ್ಲ. ಲಕ್ಷಾಂತರ ರೂಪಾಯಿ ಮೌಲ್ಯದ ಮಾತ್ರೆಗಳಲ್ಲಿ ಸರ್ವೀಸ್ ರಸ್ತೆಯಲ್ಲಿ ಎಸೆಯಲಾಗಿದೆ.

ಸರ್ಕಾರದ ಬಡವರ ಆರೋಗ್ಯ ಕಾಪಾಡಲು ಕೋಟ್ಯಾಂತರ ರೂಪಾಯಿ ವ್ಯಯ ಮಾಡುತ್ತಿದೆ. ಆದರೆ ಅವಧಿ ಮೀರದಿದ್ದರೂ ಮಾತ್ರೆಗಳನ್ನು ಆಸ್ಪತ್ರೆಗಳಿಂದ ಹೊರತಂದು ಎಸೆದವರೂ ಯಾರು? ಇದರ ಹಿಂದಿನ ಉದ್ದೇಶವೆನು? ಯಕ್ಯಾರ ಕೈವಾಡ ಇದೆಯೇ? ಯಾರನ್ನಾದರೂ ಬಲಿಪಶು ಮಾಡಲು ಸಂಚು ರೂಪಿಸಲಾಗಿದೆಯೇ ಎಂಬ ಪ್ರಶ್ನೆಗಳು ಉದ್ಭವವಾಗಲಿದೆ.

ಜಿಲ್ಲಾಸ್ಪತ್ರೆಯ ಮಾತ್ರೆಗಳೇ ಅಥವಾ ಆರೋಗ್ಯಕೇಂದ್ರಗಳಮಾತ್ರೆಗಳೇಎನ್ನುವುದು ತನಿಖೆಯಿಂದ ಗೊತ್ತಾಗಬೇಕಾಗಿದೆ. ಅವಧಿ ಮೀರಿದ ಔಷಧಿ ಮಾತ್ರೆಗಳನ್ನು ಅನುಮತಿ ಪಡೆದು ಕಮಿಟಿಯಲ್ಲಿ ಸಮಾಲೋಚನೆ ನಡೆಸಿ ಗುಂಡಿ ತೆಗೆದು ಡಿಸ್‌ಪೋಸ್ ಮಾಡಬೇಕೆಂಬ ನಿಯಮವಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ರಂಗನಾಥ್ ತಿಳಿಸಿದ್ದಾರೆ. ಆಗಿದ್ದರೆ ಅವಧಿ ಮೀರದ ಮಾತ್ರೆಗಳನ್ನು ಬೀದಿಗೆ ಎಸೆದಿದ್ದು ಯಾರು ಏತಕ್ಕಾಗಿ? ಸರ್ಕಾರದ ಹಣವನ್ನು ವ್ಯರ್ಥ ಮಾಡಿದವರು ಯಾರೆಂದು ಪತ್ತೆ ಹಚ್ಚಿ ಕಠಿಣ ಕ್ರಮ ಕೈಗೊಳ್ಳುವರೆ ಅಥವಾ ಪ್ರಕರಣವನ್ನು ಮುಚ್ಚಿ ಹಾಕುವರೆ ಎಂಬುದನ್ನು ಕಾದುನೋಡಬೇಕಾಗಿದೆ.

ಗೃಹಲಕ್ಷ್ಮಿ ಯೋಜನೆಗೆ ಹಣ ಪಡೆದರೆ ಕ್ರಿಮಿನಲ್ ಕೇಸ್: ಸಿಎಂ ಎಚ್ಚರಿಕೆ

» ಬೆಂಗಳೂರು

ಗೃಹಲಕ್ಷ್ಮೀ ಯೋಜನೆಗೆ ಹಣ ಪಡೆದಿರುವ ಬಗ್ಗೆ ದೂರು ಹಾಗೂ ಸಾಕ್ಷಿ ಇದ್ದರೆ ಹಣ ಪಡೆದವರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಇಂದು ಹಾವೇರಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದರು.

ಮಳೆಯಿಂದ ಹಾನಿಗೊಳಗಾಗಿರುವ ಜಿಲ್ಲೆಗಳಿಗೆ ಸಚಿವರ ತಂಡದ ಭೇಟಿ ರಾಜ್ಯದ ಬಹುತೇಕ ಕಡೆ ಮಳೆಯಾಗುತ್ತಿದೆ ಜೂನ್ ತಿಂಗಳಲ್ಲಿ ಸ್ವಲ್ಪ ಕೊರತೆಯಾಗಿತ್ತು. ಜುಲೈ ತಿಂಗಳಲ್ಲಿ ವಾಡಿಕೆಗಿಂತ ಮಳೆ ಹೆಚ್ಚಾಗಿದೆ ಎಂದರು.

ಹಾವೇರಿಯಲ್ಲಿ ರೈತರು ಮರಣ ಹೊಂದಿರುವ ಹಿನ್ನೆಲೆಯಲ್ಲಿಅಲ್ಲಿಗೆ ಭೇಟಿ ನೀಡುತ್ತಿದ್ದು, ಮಳೆ ಹೆಚ್ಚಾಗಿ ಬಿದ್ದಿರುವ ಕಡೆ ತಂಡಗಳನ್ನು ಮಾಡಿಕೊಂಡು ಭೇಟಿ ನೀಡಲಾಗುವುದು. ಉಡುಪಿ, ಮಂಗಳೂರು, ಉತ್ತರ ಕನ್ನಡ ಜಿಲ್ಲೆಗಳಿಗೆ ಭೇಟಿ ನೀಡುವುದಾಗಿ ತಿಳಿಸಿದರು. ಇಂದು ಸಚಿವ ಕೃಷ್ಣ ಬೈರೇಗೌಡ ಅವರು ಕೊಡಗು ಜಿಲ್ಲೆಗೆ ಭೇಟಿ ನೀಡಿದ್ದಾರೆ ಎಂದರು.

27 ರಂದು ಮಹತ್ವದ ಸಚಿವ ಸಂಪುಟ ಸಭೆ ನಿಗದಿ

» ಬೆಂಗಳೂರು

ಒಂದೆಡೆ ರಾಜ್ಯ ಸರ್ಕಾರದ ಸಚಿವರ ವಿರುದ್ಧ ಶಾಸಕರು ಅಸಮಾಧಾನ ಹೊರ ಹಾಕಿದ್ದರೇ, ಮತ್ತೊಂದೆಡೆ ಜುಲೈ.27ರಂದುಮಹತ್ವದರಾಜ್ಯ ಸಚಿವ ಸಂಪುಟ ಸಭೆಯನ್ನು ನಿಗದಿ ಪಡಿಸಲಾಗಿದೆ.

ರಾಜ್ಯ ಸರ್ಕಾರದಲ್ಲಿನ ಕೆಲ ಸಚಿವರು ಶಾಸಕರಿಗೆ ಸರಿಯಾಗಿ ಸ್ಪಂದಿಸುತ್ತಿಲ್ಲ. ಅಹಂಕಾರದಿಂದ ವರ್ತಿಸುತ್ತಿದ್ದಾರೆ. ವರ್ಗಾವಣೆ ದಂಧೆಯಲ್ಲಿ ತೊಡಗಿದ್ದಾರೆ ಎಂಬುದಾಗಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರಿಗೆ ಶಾಸಕರು, ಪರಿಷತ್ ಸದಸ್ಯರು ದೂರು ನೀಡಿದ್ದಾರೆ. ಅಲ್ಲದೇ ಸೂಕ್ತ ಸೂಚನೆ, ನಿರ್ದೇಶನ ನೀಡುವಂತೆ ಒತ್ತಾಯಿಸಿದ್ದಾರೆ.

ಈ ಬೆನ್ನಲ್ಲೆ ಇದೀಗ ದಿನಾಂಕ 27–07–2023ರ ಗುರುವಾರ ಸಂಜೆ 4 ಗಂಟೆಗೆ ಸಚಿವ ಸಂಪುಟ ಸಭೆಯನ್ನು ಕರೆಯಲಾಗಿದೆ. 2023ನೇ ಸಾಲಿನ 5ನೇ ಸಚಿವ ಸಂಪುಟ ಸಭೆ ಇದಾಗಿದ್ದು, ಜುಲೈ.27ರಂದು ವಿಧಾನಸೌಧದ ಸಚಿವ ಸಂಪುಟ ಸಭಾಮಂದಿರದಲ್ಲಿ ನಡೆಯಲಿದೆ.

ಲೋಕಸಭೆಗೆ ಯಾರ ಜೊತೆ ಹೊಂದಾಣಿಕೆ ಇಲ್ಲ: ಹೆಚ್‌ಡಿಡಿ

» ಬೆಂಗಳೂರು

ಮುಂಬರುವ ಲೋಕಸಭಾ ಚುನಾವಣೆಗೆ ನಾವು ಯಾವುದೇ ಪಕ್ಷದ ಜತೆ ಮೈತ್ರಿ ಮಾಡಿಕೊಳ್ಳುವುದಿಲ್ಲ, ಬದಲಾಗಿ ಸ್ವತಂತ್ರವಾಗಿ ಸ್ಪರ್ಧೆ ಮಾಡುತ್ತೇವೆ ಎಂದು ಹೇಳುವ ಮೂಲಕ ಬಿಜೆಪಿ–ಜೆಡಿಎಸ್ ಮೈತ್ರಿ ಕುರಿತಾದ ಊಹಾಪೋಹಳಿಗೆ ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರು ತೆರೆ ಎಳೆದರು.

ನಗರದಲ್ಲಿಂದು ಸುದ್ದಿಗೋಷ್ಠಿ ನಡೆಸಿದ ಎಚ್‌ಡಿಡಿ, ನೈಸ್ ಹಗರಣ ಹಾಗೂ ಜೆಡಿಎಸ್ ಮೈತ್ರಿ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಮಾತನಾಡಿದರು.

ಎಚ್‌ಡಿಡಿ ಸಲಹೆ:: ಟಿ. ಬಿ. ಜಯಚಂದ್ರ ಅವರು ನೈಸ್ ಸಂಸ್ಥೆಯ ಬಗ್ಗೆ ಕೊಟ್ಟಿರುವ ಸದನ ಸಮಿತಿಯ ವರದಿಯನ್ನು ಜಾರಿಗೊಳಿಸುವ ಬಗ್ಗೆ ಸಿದ್ದರಾಮಯ್ಯ ಅವರು ಇಲ್ಲಿಯವರೆಗೂ ತೀರ್ಮಾನವನ್ನೇ ಕೈಗೊಂಡಿಲ್ಲ. ಬೊಮ್ಮಾಯಿಯವರ ಸರ್ಕಾರದಲ್ಲಿ ಸಮಿತಿ ಮಾಡಿದರು. ಹೆಚ್ಚುವರಿ ಭೂಮಿಯನ್ನು ವಶಕ್ಕೆ ಪಡೆಯಬೇಕೆಂದು ಹೇಳಿದರು. 11660 ಎಕರೆ ವಶಕ್ಕೆ ಪಡೆಯುವಂತೆ ವರದಿ ನೀಡಿದ್ದಾರೆ. ಇದು ಯಾರ ಭೂಮಿ? ಇದರಲ್ಲಿ ಬರುವ ಹಣವನ್ನು ನಿಮ್ಮ ಗ್ಯಾರಂಟಿಗೆ ಬಳಸಿಕೊಳ್ಳಿ, ಕೋಟ್ಯಂತರ ರೂಪಾಯಿ ಹಣ ಇದರಲ್ಲಿ ಬರುತ್ತೆ ಎಂದು ಎಚ್‌ಡಿಡಿ ಸಲಹೆ ನೀಡಿದರು.

ಅದು ಅವರ ಭ್ರಮೆ : ಸಿದ್ದರಾಮಯ್ಯನವರೇ ಅಧಿಕಾರ ಶಾಶ್ವತ ಅಲ್ಲ. ಆದರೆ ನಿಮ್ಮ ಮಾತು ಹೃದಯದ ಅಂತರಾಳದಿಂದ ಬರಬೇಕು. ಪತ್ರಕರ್ತರಿಗೆ ಎಥಿಕ್ಸ್ ಬಗ್ಗೆ ಸಿದ್ದರಾಮಯ್ಯ ಹೇಳ್ತಾರೆ, ಆದರೆ ಅವರು ತಮ್ಮ ಎಥಿಕ್ಸ್ ಏನು ಎಂದು ತೋರಿಸಬೇಕು. ನಿಮಗೆ ಬೇಕಾದಾಗ ಕಮಲದ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳಬಹುದು. ಆದರೆ, ನಾವು ಮಾಡಿಕೊಂಡರೆ ಸೆಕ್ಯುಲರ್ ಬಗ್ಗೆ ಮಾತನಾಡುತ್ತಾರೆ. ನೀವು ನೀತಿವಂತರು ಮತ್ತು ಸತ್ಯವಂತರು ನೀವು ಮಾತ್ರ ಹೊಂದಾಣಿಕೆ ಮಾಡಿಕೊಳ್ಳಬಹುದು ಎಂದು ಟೀಕಿಸಿದ ಎಚ್‌ಡಿಡಿ, ರಾಜ್ಯದಲ್ಲಿ ಮೊದಲಿಗೆ ಕಾಂಗ್ರೇಸ್ಸೇತರ ಸರ್ಕಾರ ಬಂದಿದ್ದು 1983 ರಲ್ಲಿ. ಆಗ ಜನತಾ ಪಾರ್ಟಿ ಸರ್ಕಾರ ಬಂದಿತ್ತು. 18 ಬಿಜೆಪಿ, 8 ಕಮ್ಯುನಿಸ್ಟ್ ಹಾಗೂ 10 ಪಕ್ಷೇತರರು ಇದ್ದರು. ಆಗ ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಿಲ್ವಾ? ಸಿದ್ದರಾಮಯ್ಯನವರು ಕಾವಲು ಸಮಿತಿಯ ಅಧ್ಯಕ್ಷರಾಗಿರಲಿಲ್ವಾ?

ಪುಟ ↘ 3

ಪ್ರಮುಖ ಸುದ್ದಿ

ನನ್ನ ಧ್ವನಿ ಎಂದೂ ಅಡಗಿಸಲು ಸಾಧ್ಯವಿಲ್ಲ

» ಬೆಂಗಳೂರು

ನನಗೆ ಸಿಎಂ ಮಾಡೋದೂ ಗೊತ್ತು, ಇಳಿಸೋದೂ ಗೊತ್ತು ಎಂಬ ಹಿರಿಯ ನಾಯಕ ಬಿ.ಕೆ. ಹರಿಪ್ರಸಾದ್ ಅವರ ಮಾತು ಕಾಂಗ್ರೆಸ್‌ನಲ್ಲಿ ಭಾರಿ ಗದ್ದಲಕ್ಕೆ ಕಾರಣವಾಗಿದೆ. ಅವರ ಹೇಳಿಕೆ ವಿರುದ್ಧ ಸಾಕಷ್ಟು ಪ್ರತಿರೋಧಗಳು ಪಕ್ಷದೊಳಗೆ ವ್ಯಕ್ತವಾಗಿದ್ದವು.

ಮುಖ್ಯಮಂತ್ರಿ ಸಿದ್ಧರಾಮಯ್ಯ ವಿರುದ್ಧದ ಈ ಹೇಳಿಕೆಗೆ ಅವರ ಆಪ್ತರು ಕಿಡಿಕಾರಿದ್ದರು. ಅಲ್ಲದೆ, ಇತರ ಸಚಿವರೂ ಸಹ ಅಸಮಾಧಾನ ವ್ಯಕ್ತಪಡಿಸಿದ್ದರು. ಆದರೆ, ಈ ಬಗ್ಗೆ ಪುನಃ ಮಾತನಾಡಿರುವ ಬಿ.ಕೆ. ಹರಿಪ್ರಸಾದ್ ಅವರು ತಮ್ಮ ಹೇಳಿಕೆಯನ್ನು ಸಮರ್ಥನೆ ಮಾಡಿಕೊಂಡಿದ್ದಾರೆ."ನನ್ನ ಧ್ವನಿಯನ್ನು ಎಂದೂ ಅಡಗಿಸಲು ಸಾಧ್ಯವಿಲ್ಲ" ಎಂದು ಗುಡುಗಿದ್ದಾರೆ.

ಇತ್ತ ಬಿ.ಕೆ. ಹರಿಪ್ರಸಾದ್ ಹೇಳಿಕೆಯನ್ನು ಬಿಜೆಪಿ ಅಸ್ತ್ರವಾಗಿ ಬಳಸಿಕೊಂಡಿದ್ದು,

ರಾಜ್ಯ ಹಾಗೂ ಕೇಂದ್ರ ನಾಯಕರು ಇದರ ಬಗ್ಗೆ ಮಾತನಾಡಿದ್ದಾರೆ. ಕಾಂಗ್ರೆಸ್ ಪಾಳೆಯದಲ್ಲೂ ವಿರೋಧ ಹಾಗೂ ತಟಸ್ಥ ನೀತಿಗಳು ವ್ಯಕ್ತವಾಗಿವೆ. ಕೆಲವರು ನೇರವಾಗಿಯೇ ಟೀಕಿಸಿದ್ದು, ಹರಿಪ್ರಸಾದ್ ಈ ರೀತಿ ಹೇಳಿಕೆ ನೀಡಬಾರದು. ಇದು ಪಕ್ಷದ ಹಿತದೃಷ್ಟಿಯಿಂದ ಒಳ್ಳೆಯದಲ್ಲ. ಎಲ್ಲವನ್ನೂ ಹೈಕಮಾಂಡ್ ನಿರ್ಧಾರ ಮಾಡುತ್ತದೆ ಎಂಬ ಹೇಳಿಕೆಯನ್ನು ನೀಡಿದ್ದರು.

ಹೀಗೆ ತಮ್ಮ ಮೇಲೆ ಪಕ್ಷದೊಳಗೆ ವಾಗ್ದಾಳಿ ಪ್ರಾರಂಭವಾಗಿದ್ದರಿಂದ ಆ ಬಗ್ಗೆ ಪ್ರತಿಕ್ರಿಯೆ ನೀಡಿರುವ ಹರಿಪ್ರಸಾದ್, ತಮ್ಮ ಹೇಳಿಕೆಯನ್ನು ಮತ್ತೊಮ್ಮೆ ಸಮರ್ಥನೆ ಮಾಡಿಕೊಂಡಿದ್ದಾರೆ. ತಮಗೆ ಯಾವುದೇ ಅಧಿಕಾರದ ದಾಹ ಇಲ್ಲ ಎಂದು ಹೇಳುತ್ತಲೇ, ಸಾಮಾಜಿಕ ನ್ಯಾಯದ ಪರವಾಗಿ ಧ್ವನಿ ಎತ್ತಿದ್ದಾರೆ.

ಬಿ.ಕೆ. ಹರಿಪ್ರಸಾದ್ ಟ್ವೀಟ್‌ನಲ್ಲೇನಿದೆ?: ವಿಧಾನ ಪರಿಷತ್ ಹಿರಿಯ ಸದಸ್ಯ ಬಿ.ಕೆ. ಹರಿಪ್ರಸಾದ್ ಈ ಸಂಬಂಧ ಟ್ವೀಟ್ ಮಾಡಿದ್ದು, ನಾನು ವೈಯಕ್ತಿಕ ಹಿತಾಸಕ್ತಿಗಾಗಿ ಎಂದೂ ರಾಜಕೀಯ ಮಾಡಿದವನಲ್ಲ. ಸಾಮಾಜಿಕ ಬದಲಾವಣೆಗಾಗಿ ರಾಜಕೀಯಕ್ಕೆ ಬಂದವನು. ಮಂತ್ರಿ, ಮುಖ್ಯಮಂತ್ರಿ ಸೇರಿದಂತೆ ಯಾವ ಅಧಿಕಾರದ ಮೇಲೂ ಲಾಬಿ ನಡೆಸಿದ ಇತಿಹಾಸವಿಲ್ಲ. ಅದರ ಮೇಲೆ ಆಸೆಯೂ ಇಲ್ಲ. ಸಾಮಾಜಿಕ ನ್ಯಾಯದ ಪರ ನನ್ನ ಧ್ವನಿಯನ್ನು ಎಂದೂ ಅಡಗಿಸಲು ಸಾಧ್ಯವಿಲ್ಲ ಎಂದು ಗುಡುಗಿದ್ದಾರೆ.

ಈ ಮೂಲಕ ತಮ್ಮ ಬಾಯನ್ನು ಯಾರಿಂದಲೂ ಕಟ್ಟಿ ಹಾಕಲು ಸಾಧ್ಯವಾಗದು ಎಂಬ ಸಂದೇಶವನ್ನು ರವಾನೆ ಮಾಡಿದ್ದಾರೆ. ವೈಯಕ್ತಿಕವಾಗಿ ರಾಜಕೀಯ ಮಾಡಿದವನಲ್ಲ. ಆದರೆ, ಸಾಮಾಜಿಕ ನ್ಯಾಯದ ಪರ ತಾವು ಧ್ವನಿ ಎತ್ತಲಿದ್ದು, ಅದನ್ನು ಅಡಗಿಸಲು ಯಾರಿಂದಲೂ ಸಾಧ್ಯ ಇಲ್ಲ ಎಂದು ಹೇಳುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಅಗತ್ಯ ಬಿದ್ದರೆ ಮತ್ತೆ ಮಾತನಾಡುವೆ ಎಂಬ ಸಂದೇಶವನ್ನು ಈ ಟ್ವೀಟ್ ಮೂಲಕ ನೀಡಿದ್ದಾರೆನ್ನಲಾಗಿದೆ.

SRI AHOBALA TVS
Charge up, take off!
Experience the power of electric with the
TVS iQUBE ELECTRIC
B

ಚಿನ್ನದ ಬೆಲೆ	
91.6 ಕೆಡಿಎಂ (ಗ್ರಾಂ)	5500
85 ಕೆಡಿಎಂ (ಗ್ರಾಂ)	5100

ಬೆಳ್ಳಿ ಬೆಲೆ	
ಕೆಜಿ	63500

ಅಂಬೇಡ್ಕರ್ ಒಂದು ಜಾತಿಗೆ ಸೀಮಿತ ಮಾಡಬೇಡಿ: ಷಡಕ್ಷರಿಮುನಿ ಸ್ವಾಮೀಜಿ

» ಚಿತ್ರದುರ್ಗ

ಮಹಾಮಾನವತಾವಾದಿ, ವಿಶ್ವಮಾನವ ಡಾ.ಬಿ.ಆರ್.ಅಂಬೇಡ್ಕರ್‌ರವರನ್ನು ಯಾವುದೇ ಒಂದು ಜಾತಿಗೆ ಕಟ್ಟಿ ಹಾಕಬಾರದು ಎಂದು ಹಿರಿಯೂರು ಆದಿಜಾಂಬವ ಬೃಹನ್ಮಠದ ಷಡಕ್ಷರಿಮುನಿ ಸ್ವಾಮೀಜಿ ಹೇಳಿದರು.

ಮಹಾನಾಯಕ ದಲಿತ ಸೇನೆ ಕರ್ನಾಟಕ ರಾಜ್ಯ ಸಮಿತಿ ಸಂಘಟನೆ ಉದ್ಘಾಟನೆ ಹಾಗೂ ಉಪನ್ಯಾಸ ಕಾರ್ಯಕ್ರಮವನ್ನು ಭಾನುವಾರ ಐ.ಎಂ.ಎ.ಹಾಲ್‌ನಲ್ಲಿ ಉದ್ಘಾಟಿಸಿ ಮಾತನಾಡಿದರು.

ಶೋಷಿತರು, ದಲಿತರು, ಧಮನಿತರ ಮೇಲೆ ನಿರಂತರವಾಗಿ ದಬ್ಬಾಳಿಕೆ. ಅತ್ಯಾಚಾರ ನಡೆಯುತ್ತಿದೆ. ಅದರಲ್ಲೂ ಉತ್ತರ ಭಾರತದಲ್ಲಿ ಜಾಸ್ತಿ. ನ್ಯಾಯಾಂಗ ಮಧ್ಯಪ್ರವೇಶಿಸಿ ಪ್ರಕರಣದಾಖಲಿಸಿಕೊಂಡು ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವ ಮೂಲಕ ನ್ಯಾಯ ಒದಗಿಸಬೇಕು. ಅದಕ್ಕಾಗಿ ನ್ಯಾಯಾಂಗ ವ್ಯವಸ್ಥೆ ಗಟ್ಟಿಯಾಗಬೇಕು. ಮೇಲು–ಕೀಳು ಎನ್ನುವ ತಾರತಮ್ಯ ಎಲ್ಲಿಯವರೆಗೂ ಇರುತ್ತದೋ ಅಲ್ಲಿಯತನಕ ದಲಿತರ ಬದುಕು ಹಸನಾಗುವುದಿಲ್ಲ ಎಂದರು.

ನೊಂದವರು, ಅಸಮಾನತೆಗೆ ಒಳಗಾದವರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಮಹಾನಾಯಕ ದಲಿತ ಸೇನೆ ಕೆಲಸ ಮಾಡಬೇಕು. ಯಾವುದೇ ಒಂದು ಜಾತಿಗೆ ಗುರುತಿಸಿಕೊಳ್ಳುವುದು ಸರಿಯಲ್ಲ.

ಮೇಲ್ವರ್ಗದವರು ಡಾ.ಬಿ.ಆರ್. ಅಂಬೇಡ್ಕರ್ ಕೇವಲ ದಲಿತರಿಗೆ ಮಾತ್ರ ಮೀಸಲು ಎನ್ನುವ ತಪ್ಪು ಕಲ್ಪನೆ ಮೂಡಿಸುತ್ತಿದ್ದಾರೆ. ಇದರ ವಿರುದ್ಧ ಸಂಘಟನೆ ಎಚ್ಚೆತ್ತುಕೊಂಡು ಎಲ್ಲರಲ್ಲಿಯೂ ಜಾಗೃತಿ ಮೂಡಿಸಬೇಕೆಂದು ಸಲಹೆ ನೀಡಿದರು.

ಉದ್ಯಮಿ ಹಾಗೂ ಸಮಾಜ ಸೇವಕ ಬೆಂಗಳೂರಿನ ಜಿ.ಟಿ.ಸುರೇಶ್‌ಕುಮಾರ್ ಮಾತನಾಡಿ ದಲಿತರು ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಸದೃಢರಾಗಬೇಕು. ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸಿ. ಅಸಮಾನತೆ, ಲಿಂಗ ತಾರತಮ್ಯ ನಿವಾರಣೆಯಾಗಬೇಕು. ಸರ್ಕಾರದಲ್ಲಿ ಸಾಕಷ್ಟು ಸೌಲಭ್ಯಗಳಿವೆ ಎಲ್ಲವನ್ನು ಅರ್ಹರಿಗೆ ತಲುಪಿಸುವ ನಿಟ್ಟಿನಲ್ಲಿ ಮಹಾನಾಯಕ ದಲಿತ ಸೇನೆ ಕೆಲಸ ಮಾಡಬೇಕೆಂದು ತಿಳಿಸಿದರು.

ಕರ್ನಾಟಕ ಜನಶಕ್ತಿ ಉಪಾಧ್ಯಕ್ಷೆ ಬೆಂಗಳೂರಿನ ಶ್ರೀಮತಿ ಗೌರಿ ಸ್ವತಂತ್ರ್ಯ ಭಾರತದ ಅಸ್ಪೃಶ್ಯ ಮಹಿಳೆಯರ ವಾಸ್ತವಗಳು ಎಂಬ ವಿಷಯ ಕುರಿತು ಮಾತನಾಡುತ್ತ ದೇಶದಲ್ಲಿ ಯಾವ ಮಹಿಳೆಯೂ ಸುರಕ್ಷಿತವಾಗಿಲ್ಲ. ದಲಿತ ಮಹಿಳೆಯ ಮೇಲೆ ನಿರಂತರವಾಗಿ ದಬ್ಬಾಳಿಕೆ, ಅತ್ಯಾಚಾರ ನಡೆಯುತ್ತಿದೆ. ಇತ್ತೀಚೆಗಂತೂ ಅತ್ಯಾಚಾರವೆಸಗಿ ಅಷ್ಟಕ್ಕೆ ಸುಮ್ಮನಾಗುವುದಿಲ್ಲ. ಭೀಕರವಾಗಿ ಹತ್ಯೆ ಮಾಡಲಾಗುತ್ತಿದೆ. ಇದನ್ನು ಕೇಳುವವರೆ ಯಾರು ಇಲ್ಲದಂತಾಗಿದ್ದಾರೆಂದು ಬೇಸರ ವ್ಯಕ್ತಪಡಿಸಿದರು.

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು ಎಪ್ಪತ್ತು ವರ್ಷಗಳಾಗಿದ್ದರು ಹೆಣ್ಣಿಗೆ ರಕ್ಷಣೆಯಿಲ್ಲ. ಭಾರತಕ್ಕೆ ಚಿನ್ನ, ಕಂಚಿನ ಪದಕಗಳನ್ನು ತಂದ ಕುಸ್ತಿಪಟುಗಳ ಮೇಲೂ ನಿರಂತರ ಅತ್ಯಾಚಾರವೆಸಗಿರುವುದು ಇಡಿ ದೇಶಕ್ಕೆ ಅವಮಾನ. ನಿರ್ಭಯ ಪ್ರಕರಣ, ಬಿಲ್ಕಿಸ್‌ಭಾನು, ಸೌಜನ್ಯ, ಗೌರಿ ಲಂಕೇಶ್, ತೀಸ್ತಾ ಸೆಟಿಲ್ವಾಡ್, ಇವರುಗಳ ಹತ್ಯೆಯನ್ನು ನೆನಪಿಸಿಕೊಂಡರೆ ಜೀವ ಜಲ್ ಎನಿಸುತ್ತದೆ. ಬಿಜಾಪುರದಲ್ಲಿ ಹನ್ನೆರಡು ವರ್ಷದ ಬಾಲಕಿ ಮೇಲೆ ಅತ್ಯಾಚಾರವೆಸಗಿ ಕೊಲೆಗೈದು ಬಾವಿಯಲ್ಲಿ ಎಸೆಯಲಾಗಿತ್ತು. ಪುರುಷ ಕೇಂದ್ರಿತ ಆಲೋಚನೆಯಿರುವ ಸಮಾಜದಲ್ಲಿ ಹೆಣ್ಣು ಬದುಕುವುದು ಕಷ್ಟವಾಗಿದೆ. ಮುರುಘಾಮಠದ ಶರಣರು ಬಾಲಕಿಯರ ಮೇಲೆ ಲೈಂಗಿಕ ಕಿರುಕುಳ ನಡೆಸಿರುವ ಆರೋಪದ ಮೇಲೆ ಜೈಲು ಪಾಲಾಗಿದ್ದಾರೆ. ಬೆಂಗಳೂರು ಸಿಟಿಯಲ್ಲಿ ಪೌರ ಕಾರ್ಮಿಕರಾಗಿ ಕೆಲಸ ಮಾಡುತ್ತಿರುವವರು ದಲಿತ ಹೆಣ್ಣು ಮಕ್ಕಳು. ಡಾ.ಬಿ.ಆರ್.ಅಂಬೇಡ್ಕರ್ ವಿಚಾರದ ಹಾದಿಯಲ್ಲಿ ಸಾಗಿ ಸಂಘಟಿತರಾಗಿ ಮೂಢನಂಬಿಕೆ, ಅಜ್ಞಾನಕ್ಕೆ ಒಳಗಾಗಬೇಡಿ ಎಂದು ಮಹಾನಾಯಕ ದಲಿತ ಸೇನೆ ಸಂಘಟನೆ ಪದಾಧಿಕಾರಿಗಳಿಗೆ ಕಿವಿ ಮಾತು ಹೇಳಿದರು.

ಮಹಾನಾಯಕ ದಲಿತ ಸೇನೆ ರಾಜ್ಯಾಧ್ಯಕ್ಷ ಮಂಜುನಾಥ್ ಎ.ತಾಳಿಕೆರೆ ಅಧ್ಯಕ್ಷತೆ ವಹಿಸಿದ್ದರು.ಯುವ ಚಿಂತಕ ಹುಲಿಕುಂಟೆ ಮೂರ್ತಿ, ಹೈಕೋರ್ಟ್ ನ್ಯಾಯವಾದಿ ಹನುಮೇಶ್ ಗುಂಡೂರು, ಕೊಟ್ಟಶಂಕರ್, ಕೋಡಿಹಳ್ಳಿ ಸಂತೋಷ್, ಗುರುಸ್ವಾಮಿ, ಲೈಂಗಿಕ ಅಲ್ಪಸಂಖ್ಯಾತರ ರಾಜ್ಯಾಧ್ಯಕ್ಷ ವೀಣ ಜಿ, ಮಹಾನಾಯಕ ದಲಿತ ಸೇನೆ ರಾಜ್ಯ ಪ್ರಧಾನ ಕಾರ್ಯದರ್ಶಿ ಹೊಳೆಯಪ್ಪ ಕೆ.ಸಾಕ್ಯ, ಗೌರವಾಧ್ಯಕ್ಷ ಜಿ.ಟಿ.ರವಿಕುಮಾರ್, ಜಿಲ್ಲಾಧ್ಯಕ್ಷ ಅಶೋಕ್ ಟಿ, ರವಿಕುಮಾರ್‌ಘಾಟ್ ಇನ್ನು ಅನೇಕರು ವೇದಿಕೆಯಲ್ಲಿದ್ದರು.ವಿದ್ಯಾರ್ಥಿಗಳಿಗೆ ನೋಟ್‌ಬುಕ್‌ಗಳನ್ನು ವಿತರಿಸಲಾಯಿತು.

ಪಲ್ಸ್ ಪೋಲಿಯೋ ಕಟ್ಟು ನಿಟ್ಟಾಗಿ ಪ್ರಗತಿ ಆಗಿದೆ ಎಂದರೆ ಅದು ರೋಟರಿ ಸಾಧನೆ

» ಹೊಸದುರ್ಗ

ರೋಟರಿ ಕ್ಲಬ್ ಸಂಸ್ಥೆಯ ಸಾಧನೆ ತುಂಭಾ ದೊಡ್ಡದು,ರೋಟರಿ ಸಂಸ್ಥೆ 1905 ರಲ್ಲಿ ಈ ನಾಡಿನಲ್ಲಿ ಹುಟ್ಟಿ ಬೆಳೆದ ಸ್ವಾಮಿವಿವೇಕಾನಂದರು ಪ್ರತಿನಿಧಿಸಿ ಬಂದ ಅಮೇರಿಕಾದ ಚಿಕಾಗೋದಲ್ಲಿ ಸ್ಥಾಪನೆಯಾದ ಈ ಸಂಸ್ಥೆ ಸಾಮಾಜಿಕ ಕ್ಷೇತ್ರದಲ್ಲಿ ತನ್ನದ ಆದ ಅಪಾರವಾದ ಕೊಡುಗೆಗಳನ್ನ ನೀಡಿರುವ ಒಂದು ಮಹತ್ವದ ಸಂಸ್ಥೆಯಾಗಿದೆ ಎಂದು ರೋಟರಿ ಕ್ಲಬ್ ಹೊಸದುರ್ಗ ಶಾಖೆಯ ನೂತನ ಅಧ್ಯಕ್ಷ ಜಯರಾಂಬಾಬು ತಿಳಿಸಿದರು.

ಪಟ್ಟಣದ ಹುಳಿಯಾರು ರಸ್ತೆಯ ಹೌಸಿಂಗ್ ಬೋರ್ಡ್ ಮುಂಭಾಗ ಇರುವ ಗೋಲ್ಡನ್ ಇಲ್ ರೆಸಾರ್ಟ್‌ನಲ್ಲಿ ಹಿರಿಯೂರು ರೋಟರಿ ಕ್ಲಬ್ ವತಿಯಿಂದ ನಡೆದ ಪದಗ್ರಹಣ ಕಾರ್ಯಕ್ರಮದಲ್ಲಿ ಪದಗ್ರಹಣ ಸ್ವೀಕರಿಸಿ ಮಾತನಾಡಿದರು.

ಕಳೆದ 7 ವರ್ಷಧ ಹಿಂದೆ ಪಾಕಿಸ್ತಾನಕ್ಕೆ ಹೋಗಿದ್ದೆವು,ಅಲ್ಲಿ ನಮಗೆ ಪಲ್ಸ್ ಪೋಲಿಯೋ ಹಾಕಿ ಸರ್ಟಿಫಿಕೇಟ್ ಇಲ್ಲದೆ ನಮ್ಮನ್ನ ಒಳಗೆ ಬಿಟ್ಟಿದ್ದರು, ನಮ್ಮ ದೇಶದಲ್ಲಿ ಇಷ್ಟೊಂದು ಪಲ್ಸ್ ಪೋಲಿಯೋ ಹಾಗೂ ಕಟ್ಟು ನಿಟ್ಟಾಗಿ ಪ್ರಗತಿ ಆಗಿದೆ ಎಂದರೆ ಅದು ರೋಟರಿ ಸಂಸ್ಥೆಯ ಕಾರ್ಯ ಹಾಗೂ ಸಾಧನೆ ಅಪಾರವಾಗಿದೆ.

ಈ ನಿಟ್ಟಿನಲ್ಲಿ ನಮ್ಮ ದೇಶ ಸುರಕ್ಷಿತವಾಗಿದೆ, ಕೋರೋನಾ ಸಮಯದಲ್ಲಿ ಸಂಸ್ಥೆಯ ವತಿಯಿಂದ ಸಾಕಷ್ಟು ಸಾರ್ಥಕವಾದ

ಕೆಲಸಗಳಾಗಿವೆ, ಸಾಮಾಜಿಕ ಕ್ಷೇತ್ರಕ್ಕಾಗಿ ಸಂಸ್ಥೆ ನೂರಾರು ಕೋಟಿ ಹಣ ವ್ಯಯ ಮಾಡಿದೆ ಹಾಗೂ ಈಗಲು ವ್ಯಯ ಮಾಡುತ್ತಲೆ ಇದೆ ಎಂದು ತಿಳಿಸಿದ ಅವರು ಆರೋಗ್ಯ ಮತ್ತು ವಿದ್ಯಾಭ್ಯಾಸ ಕ್ಷೇತ್ರದಲ್ಲಿ ರೋಟರಿ ಸಂಸ್ಥೆಯ ಸೇವೆ ಸಾಕಷ್ಟಿದೆ ಎಂದು ಶ್ಲಾಘಿಸಿದರು.

ಪೋಷಕರು ಉನ್ನತ ಮಟ್ಟದ ಶಿಕ್ಷಣಕ್ಕೆ ಕಳುಹಿಸುವ ಸಲುವಾಗಿ ಲಕ್ಷಾಂತರ ಹಣ ವ್ಯಯ ಮಾಡುತ್ತಾರೆ, ಉನ್ನತ ಮಟ್ಟದ ಶಿಕ್ಷಣಕ್ಕೆ ಬಡವರ ಮಕ್ಕಳು ಹೋಗಲು ಅಸಾಧ್ಯ ಈ ನಿಟ್ಟಿನಲ್ಲಿ ಅಂತಹ ಕಡು ಬಡವರು ಇದ್ದರೆ ರೋಟರಿ ಗಮನಕ್ಕೆ ತನ್ನಿ ಲಕ್ಷಾಂತರ ನೀಡುವ ಹಣವನ್ನ ಸಾವಿರಾರು ರೂಗಳಲ್ಲಿ ವ್ಯವಸ್ಥೆ ಮಾಡುವ ಮೂಲಕ ಸಹಾಯ ಮಾಡುತ್ತೇವೆ ಎಂಬ ಆಶ್ವಾಸನೆಯನ್ನ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಗೌವರ್ನರ್ ವಾಮಿನಿಸತೀಶ್, ಕಾರ್ಯದರ್ಶಿ, ಸತೀಶ್ ಟಿ.ಎಂ, ವಿಶೇಷ ಆಹ್ವಾನಿತರಾಗಿ ರೋಟರಿ ಕ್ಲಬ್‌ನ ಎಂ.ಕೆ. ರವೀಂದ್ರ, ಮೇಶ್‌ವಿ.ತುಪಾದ್, ಎಂ.ಎಸ್. ರಾಘವೇಂದ್ರ, ಹೆಚ್.ಕಿರಣ್‌ಕುಮಾರ್,

ಸುದರ್ಶನ್‌ಕುಮಾರ್ ಹಾಗೂ ಹಿರಿಯೂರು ರೋಟರಿ ಅಧ್ಯಕ್ಷ ಡಿ.ದೇವರಾಜ್‌ಮೂರ್ತಿ ಮತ್ತು ಕಾರ್ಯದರ್ಶಿ ಎಸ್.ಜೋಗಪ್ಪ ರೋಟರಿ ಕ್ಲಬ್ ಸಂಪರ್ಕ ಅಧಿಕಾರಿ ಗುರುರಾಜ್‌ದೇಶಪಾಂಡೆ ಶ್ರಿ ವೀರಶೈವ ಮಹಿಳಾ ಸಹಕಾರ ಸಂಘದ ಅಧ್ಯಕ್ಷ ಶ್ರೀಮತಿ ಅನಿಜಾರಾಜೇಶ್ ಮತ್ತಿತರರು ಭಾಗವಹಿಸಿದ್ದರು.ಪೀಲಾಪುರ ಕಂಠೇಶ್ ಕಾರ್ಯಕ್ರಮ ನಿರೂಪಿಸಿದರು.

ಮಣಿಪುರದ ಮಹಿಳೆಯರ ಬೆತ್ತಲೆ ಮೆರವಣಿಗೆ : ತಪಿತಸ್ಥರ ಗಲ್ಲಿಗೇರಿಸಿ

» ಚಳ್ಳಕೆರೆ

ಮಣಿಪುರ ರಾಜ್ಯದ ಸೇನಾಪತಿ ಜಿಲ್ಲೆಯಲ್ಲಿ ಕುಕಿಬುಡಕಟ್ಟು ಜನಾಂಗದ ಮೇಲೆ ಅಲ್ಲಿನ ಕೆಲವು ದೃಷ್ಟ ಶಕ್ತಿಗಳು ನಿರಂತರವಾಗಿ ಹಲ್ಲೆ ನಡೆಸುವುದಲ್ಲದೆ, ಬುಡಕಟ್ಟು ಸಮುದಾಯದ ಮಹಿಳೆಯರನ್ನು ಸಾರ್ವಜನಿಕವಾಗಿ ಬೆತ್ತಲೆಗೊಳಿಸಿ ಮೆರವಣಿಗೆ ಮಾಡುವ ಮೂಲಕ ಇಡೀ ಮಹಿಳಾ ಸಮುದಾಯಕ್ಕೆ ಅಪಮಾನ ಮಾಡಿದ್ದು, ಇಂತಹ ಘನಘೋರ ಕೃತ್ಯ ನಡೆಸಿದ ದೃಷ್ಟರನ್ನು ಗಲ್ಲಿಗೇರಿಸಬೇಕೆಂದು ರಾಷ್ಟ್ರಪತಿಯವರಿಗೆ ತಹಶೀಲ್ದಾರ್ ಮೂಲಕ ಮನವಿ ಮಾಡಲಾಯಿತು. ತಾಲ್ಲೂಕಿನ ವಸುಂಧರ ಶಿಕ್ಷಣ ಮತ್ತು ಗ್ರಾಮಾಭಿವೃದ್ಧಿ ಸಂಸ್ಥೆಯ ಅಧ್ಯಕ್ಷ ಕೊರ್ಲಕುಂಟೆ ತಿಪ್ಪೇಸ್ವಾಮಿ ತಹಶೀಲ್ದಾರ್ ಪರವಾಗಿ ಶಿರಸ್ಥೇದಾರ್ ಗಿರೀಶ್‌ರವರಿಗೆ ಮನವಿ ಪತ್ರ ಸಲ್ಲಿಸಿ ಮಾತನಾಡಿ, ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಸಂದರ್ಭದಲ್ಲೂ ಇಡೀ ಮಾನವ ಕುಲ ತಲೆತಗ್ಗಿಸುವಂತಹ ಹೇಯ ಕೃತ್ಯ ಮಣಿಪುರದಲ್ಲಿ ನಡೆದಿದೆ. ಇಂತಹ ಘಟನೆಗಳು ಸಮಾಜದಲ್ಲಿ ಮರುಕಳಿಸದಂತೆ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಬೇಕು. ಘಟನೆಗೆ ಕಾರಣವಾದವರನ್ನು ಕೂಡಲೇ ಪತ್ತೆಹಚ್ಚಿ ಕಾನೂನು ಕ್ರಮ ಕೈಗೊಳ್ಳಬೇಕಲ್ಲದೆ, ಇಂತಹವರನ್ನು ಗಲ್ಲಿಗೇರಿಸುವ ಮೂಲಕ ಬೆತ್ತಲೆಗೊಳಿಸಲಾದ ಮಹಿಳೆಯರಿಗೆ ನ್ಯಾಯದೊರಕಿಸಿಕೊಡಬೇಕೆಂದು ಅವರು ಒತ್ತಾಯಿಸಿದ್ದಾರೆ. ಮನವಿ ಸ್ವೀಕರಿಸಿದ ಶಿರಸ್ಥೇದಾರ್, ತಮ್ಮ ಮನವಿಯನ್ನು ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿ ಭವನಕ್ಕೆ ಕಳುಹಿಸುವ ಭರವಸೆ ನೀಡಿದರು. ಗೌರವಾಧ್ಯಕ್ಷ ಎಚ್.ಲಂಕಪ್ಪ, ಸಮಾಜ ಸೇವಕ ಎಚ್.ಎಸ್.ಸೈಯದ್, ಸರಸ್ವತಿ, ಪಿ.ಡಿ.ಮಂಜುನಾಥ, ಪಿ.ಸಿದ್ದೇಶ್, ಎಚ್.ಆನಂದ, ರುದ್ರಮುನಿ, ಎಚ್.ಹರೀಶ್, ಕಾರ್ಯದರ್ಶಿ ಕೆ.ಉಜ್ಜಿನಪ್ಪ, ಸಿ.ಜಿ.ತಿಪ್ಪೇಸ್ವಾಮಿ, ಆನಂದ ಮುಂತಾದವರು ಉಪಸ್ಥಿತರಿದ್ದರು.

ಹಾವೇರಿ ತಾಲೂಕಿನಲ್ಲಿ ಮಳೆಗೆ ಮನೆ ಕುಸಿದು ಮಗು ಸಾವು

ಹಾವೇರಿ: ತಾಲೂಕಿನ ಮಾಳಪುರ ಗ್ರಾಮದಲ್ಲಿ ಭಾರಿ ಮಳೆಗೆ ಮನೆ ಕುಸಿದು ಗಾಯಗೊಂಡಿದ್ದ ಮಗು ಸಾವನ್ನಪ್ಪಿರುವ ಘಟನೆ ನಡೆದಿದೆ. ಎರಡು ದಿನಗಳ ಹಿಂದೆ ಮನೆಕುಸಿದು ಗಾಯಗೊಂಡಿದ್ದ ಭಾಗ್ಯಮೂರು ವರ್ಷದ ಮಗುವನ್ನ ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಇದೀಗ ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ಬಾಲಕಿ ಕೊನೆಯುಸಿರೆಳೆದಿದ್ದಾಳೆ. ಈ ಕುರಿತು ಹಾವೇರಿ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಮುಖ ಸುದ್ದಿ

ಪರಶುರಾಮಪುರ ತಾಲ್ಲೂಕು ಕೇಂದ್ರ ಮಾಡುವಂತೆ ಒತ್ತಾಯಿಸಿ ಆ.15ರಂದು ಪ್ರತಿಭಟನೆ: ಸೋಮಗುದ್ದುರಂಗಸ್ವಾಮಿ ಹೇಳಿಕೆ

» ಚಳ್ಳಕೆರೆ

ಕಳೆದ ಹಲವಾರು ವರ್ಷಗಳಿಂದ ಚಳ್ಳಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಅತಿದೊಡ್ಡ ಹೋಬಳಿ ಕೇಂದ್ರ ಹಾಗೂ ಆಂಧ್ರ ಪ್ರದೇಶಕ್ಕೆ ಸಂಪರ್ಕ ಹೊಂದಿರುವ ಪರಶುರಾಮಪುರವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಬೇಕೆಂದು ಹಕ್ಕೋತ್ತಾಯವನ್ನು ಆಗಸ್ಟ್ 15ರಂದು ಮಾಡುವುದಾಗಿ ಅಖಂಡ ಕರ್ನಾಟಕ ರೈತ ಸಂಘದ ಸಂಸ್ಥಾಪಕ ಅಧ್ಯಕ್ಷ, ರೈತ ಸಂಘ ಹಿರಿಯ ಹೋರಾಟಗಾರ ಸೋಮಗುದ್ದುರಂಗಸ್ವಾಮಿ ತಿಳಿಸಿದರು.

ಅವರು, ಪತ್ರಿಕೆಯೊಂದಿಗೆ ಮಾತನಾಡಿ, ಪರಶುರಾಮಪುರ ಹೋಬಳಿ ಕೇಂದ್ರವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡುವ ಹೋರಾಟ ಕಳೆದ ಸುಮಾರು 40 ವರ್ಷಗಳಿಂದ ನಡೆದಿದೆ. ಹತ್ತಕ್ಕೂ ಹೆಚ್ಚು ಶಾಸಕರು ವಿವಿಧ ಪಕ್ಷಗಳಿಂದ ಆಯ್ಕೆಯಾಗಿದ್ದಾರೆ. ಆದರೆ, ಯಾರೂ ಸಹ ಈ ಬಗ್ಗೆ ಸರ್ಕಾರದ ಮೇಲೆ ಒತ್ತಡ ಹೇರಿಲ್ಲ. ಈ ಹಿನ್ನೆಲೆಯಲ್ಲಿ ಪರಶುರಾಮಪುರದ

ಗ್ರಾಪಂ ಕಾರ್ಯಾಲಯದಲ್ಲಿ ರೈತ ಸಂಘ ಹಾಗೂ ಸಂಘ ಸಂಸ್ಥೆಗಳ ಹೋರಾಟಗಾರರ ಸಭೆಯನ್ನು ನಡೆಸಿ ತೀರ್ಮಾನ ಕೈಗೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ಪರಶುರಾಮಪುರ ಹೋಬಳಿಯ ನೂರಾರು ಜನರು ಆಗಮಿಸಿ ಆಗಸ್ಟ್ 15ರ ಬೆಳಗ್ಗೆ 10ಕ್ಕೆ ಚಳ್ಳಕೆರೆಯಮ್ಮ ದೇವಸ್ಥಾನದಿಂದ ಮೆರವಣಿಗೆ ಹೊರಟು ನೆಹರೂ ವೃತ್ತಕ್ಕೆ ಆಗಮಿಸಿ ಅಲ್ಲಿ ಸರ್ಕಾರವನ್ನು ಒತ್ತಾಯಿಸುವುದಾಗಿ ತಿಳಿಸಿದರು. ರೈತ ಸಂಘವೂ ಸೇರಿದಂತೆ ಹಲವಾರು ಸಂಘ ಸಂಸ್ಥೆಗಳು ಈ ನಿಟ್ಟಿನಲ್ಲಿ ನಿರಂತರ ಹೋರಾಟ ಮಾಡುತ್ತಾ ಬಂದಿವೆ. ಇತ್ತೀಚೆಗೆ ಕ್ಷೇತ್ರದ ಶಾಸಕ ಟಿ.ರಘುಮೂರ್ತಿ ವಿಧಾನಸಭಾ ಅಧಿವೇಶನದಲ್ಲೂ ಒತ್ತಾಯ ಮಾಡಿದ್ದಾರೆ. ಆದರೆ, ಸರ್ಕಾರ ಈ ಬಗ್ಗೆ ಸೂಕ್ತ ನಿರ್ಧಾರ ಕೈಗೊಂಡಿಲ್ಲ. ಇದು ಹೋರಾಟಗಾರರಿಗೆ ನೋವು ತಂದಿದೆ ಆದ್ದರಿಂದ ಆಗಸ್ಟ್ 15ರಂದು ದೊಡ್ಡ ಪ್ರಮಾಣದಲ್ಲಿ ಪ್ರತಿಭಟಿಸಿ ಸರ್ಕಾರವನ್ನು ಒತ್ತಾಯಿಸುವ ಕೆಲಸ ಮಾಡಲಾಗುವುದು ಎಂದರು. ಪರಶುರಾಮಪುರ ಹೋಬಳಿ ಮಟ್ಟದ ಸಾರ್ವಜನಿಕರು, ರೈತ ಮುಖಂಡರು, ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಯುವಕರು, ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಹೋರಾಟ ಬೆಂಬಲಿಸಬೇಕೆಂದಿದ್ದಾರೆ.

ಫಾಸ್ಟ್ ನ್ಯೂಸ್

ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಗಳಿಗೆ ಕೊಲೆ ಬೆದರಿಕೆ

» ಬೆಂಗಳೂರು

ಕರ್ನಾಟಕ ಹೈಕೋರ್ಟ್‌ನ 6 ಮಂದಿ ನ್ಯಾಯಮೂರ್ತಿಗಳಿಗೆ ಕೊಲೆ ಬೆದರಿಕೆ ಸಂದೇಶ ಬಂದಿದ್ದು, ಪಾಕಿಸ್ತಾನ ಮೂಲದ ಉಗ್ರರ ಕೈವಾಡವೇ ಎಂಬ ಶಂಕೆ ವ್ಯಕ್ತವಾಗಿದೆ. ಹಣಕ್ಕಾಗಿ ಬೇಡಿಕೆ ಇಟ್ಟಿರುವ ದುಷ್ಕರ್ಮಿಗಳು, ಇದನ್ನು ಈಡೇರಿಸದಿದ್ದರೆ ಕೊಲೆ ದುಬೈ ಗ್ಯಾಂಗ್‌ನಿಂದ ಕೊಲೆ ಮಾಡಿಸುವುದಾಗಿ ಬೆದರಿಕೆ ಸಂದೇಶ ಕಳುಹಿಸಿದ್ದಾರೆ. ಹೈಕೋರ್ಟ್‌ನ ಸಾರ್ವಜನಿಕ ಸಂಪರ್ಕಾಧಿಕಾರಿ ಕೆ. ಮುರಳೀಧರ್‌ಗೆ ಸಂದೇಶ ಬಂದಿದೆ.50 ಲಕ್ಷ ರೂಪಾಯಿ ಬ್ಯಾಂಕ್ ಖಾತೆಗೆ ಜಮೆ ಮಾಡಬೇಕು ಎಂದು ಬೇಡಿಕೆ ಇಡಲಾಗಿದ್ದು, ಪಾಕಿಸ್ತಾನ ಮೂಲದ ಬ್ಯಾಂಕ್ ಖಾತೆ ನಂಬರ್ ನೀಡಿದ್ದಾರೆ. ಅಲೈಡ್ ಬ್ಯಾಂಕ್ ಲಿಮಿಟೆಡ್ ನ ಖಾತೆಯ ಸಂಖ್ಯೆಯನ್ನು ದುಷ್ಕರ್ಮಿಗಳು ನೀಡಿದ್ದಾರೆ. ಕೊಲೆ ಮಾಡಿಸುವುದಾಗಿ ವಾಟ್ಸ್ □□□ಪ್ ಮೂಲಕವೂ ಬೆದರಿಕೆ ಸಂದೇಶ ಕಳುಹಿಸಲಾಗಿದೆ.ಬೆದರಿಕೆ ಸಂಬಂಧ ಸೆಂಟ್ರಲ್ ಕ್ರೈಮ್ ಠಾಣೆಯಲ್ಲಿ ಎಫ್‌ಐ

ಫಾಸ್ಟ್ ನ್ಯೂಸ್

ತಾತ್ಕಾಲಿಕ ಫಿಜಿಯೋಥೆರಪಿಸ್ಟ್, ಆಯಾ ಮತ್ತು ಸಹಾಯಕಿಯರ ಹುದ್ದೆಗೆ ಅರ್ಜಿ ಆಹ್ವಾನ

» ಚಳ್ಳಕೆರೆ

ಸಮನ್ವಯ ಶಿಕ್ಷಣ ಯೋಜನೆಯಡಿ ಗೃಹ ಮತ್ತು ಶಾಲಾಧರಿತ ಶಿಕ್ಷಣ ಪಡೆಯುತ್ತಿರುವ ಶಾಲಾ ವಿದ್ಯಾರ್ಥಿಗಳಿಗೆ ತಾಲ್ಲೂಕು ಸಮನ್ವಯ ಶಿಕ್ಷಣ ಕೇಂದ್ರದಲ್ಲಿ ಫಿಜಿಯೋಥೆರಪಿ ಸೇವೆಯನ್ನು ಒದಗಿಸಲು ತಾತ್ಕಾಲಿಕವಾಗಿ ಫಿಜಿಯೋಥೆರಪಿಸ್ಟ್, ಆಯಾ ಮತ್ತು ಸಹಾಯಕಿಯರನ್ನು ನೇಮಿಸಿ ಅರ್ಜಿಯನ್ನು ಆಹ್ವಾನಿಸಿದ್ದು, ಜುಲೈ 27ರಂದು ಅರ್ಜಿಯನ್ನು ಬಿಎಂ ಸರ್ಕಾರಿ ಪ್ರೌಢಶಾಲಾ ಹಿಂಭಾಗದ ಬಿಆರ್‌ಸಿ ಕಚೇರಿಗೆ ತಲುಸಲು ಸೂಚನೆ ನೀಡಲಾಗಿದೆ. ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಎಸ್.ಸುರೇಶ್, ಸಂಬಂಧಪಟ್ಟ ಎಲ್ಲಾ ದಾಖಲಾತಿಗಳೊಂದಿಗೆ ನಿಗದಿತ ಅವಧಿಯೊಳಗೆ ಅರ್ಜಿ ಸಲ್ಲಿಸಬೇಕು. ತಡವಾಗಿಬಂದಅರ್ಜಿಗಳನ್ನುತಿಸ್ಕರಿಸಲಾಗುವುದು. ಪಿಜಿಯೋಥೆರಪಿಸ್ಟ್‌ಗೆ ಡಿಪಿಟಿ, ಬಿಪಿಡಿ ತರಬೇತಿ ಪಡೆದವರು, ಆಯಾ ಮತ್ತು ಸಹಾಯಕಿಯರಿಗೆ ಎಸ್‌ಎಸ್‌ಎಲ್‌ಸಿ ಉತ್ತರ್ಣರಾದವರು ಅರ್ಜಿ ಸಲ್ಲಿಸಬಹುದಾಗಿದೆ.

ಪಡಿತರ ಚೀಟಿಗೆ ಆಧಾರ್ ಲಿಂಕ್ ಜೋಡಣೆ ಕೊನೆ ದಿನಾಂಕ ವಿಸ್ತರಣೆ

» ನವದೆಹಲಿ

ನಿಮ್ಮ ಪಡಿತರ ಚೀಟಿ ಮತ್ತು ಆಧಾರ್ ಕಾರ್ಡ್ ಅನ್ನು ಲಿಂಕ್ ಮಾಡಲು ಕೊನೆಯ ದಿನಾಂಕ ಜೂನ್ 30 ಆಗಿತ್ತು ಆದರೆ ಭಾರತ ಸರ್ಕಾರವು ಈಗ ಗಡುವನ್ನು ಸೆಪ್ಟೆಂಬರ್ 30, 2023 ರವರೆಗೆ ವಿಸ್ತರಿಸಿದೆ. ಅಂತ್ಯೋದಯ ಅನ್ನ ಯೋಜನೆ ಮತ್ತು ಆದ್ಯತಾ ಕುಟುಂಬ ಯೋಜನೆಯಡಿ ಪ್ರಯೋಜನಗಳನ್ನು ಪಡೆಯುತ್ತಿರುವವರಿಗೆ ಆಧಾರ್ ಕಾರ್ಡ್ ಲಿಂಕ್ ಮಾಡುವುದು ಕಡ್ಡಾಯವಾಗಿದೆ.ನಿಮ್ಮ ಆಧಾರ್ ಮತ್ತು ಪಡಿತರ ಚೀಟಿಯನ್ನು ಲಿಂಕ್ ಮಾಡಲು, ಉಚಿತವಾಗಿ ಸೇವೆಯನ್ನು ಪಡೆಯಲು ನೀವು ಸ್ಥಳೀಯ ಪಡಿತರ ಕಚೇರಿಗೆ ಭೇಟಿ ನೀಡಬೇಕಾಗುತ್ತದೆ. ಬಳಕೆದಾರರು ಅನೇಕ ಪಡಿತರ ಚೀಟಿಗಳನ್ನು ಹೊಂದುವುದನ್ನು ತಡೆಯುವುದರಿಂದ ಸರ್ಕಾರ ಇದನ್ನು ಕಡ್ಡಾಯಗೊಳಿಸಿದೆ. ಅನರ್ಹ ಜನರ ಆದಾಯವು ಮಿತಿಯನ್ನು ಮೀರಿರುವುದರಿಂದ ಪಡಿತರವನ್ನು ಪಡೆಯಲು ಮೇಲ್ವಿಚಾರಣೆ ಮಾಡಲು ಇದು ಅಧಿಕಾರಿಗಳಿಗೆ ಸಹಾಯ ಮಾಡುತ್ತದೆ.ಪಡಿತರ ಚೀಟಿಗಳು ಜನರಿಗೆ ಸಬ್ಸಿಡಿ ದರದಲ್ಲಿ ಆಹಾರವನ್ನು ಪಡೆಯಲು ಮತ್ತು ಅವುಗಳನ್ನು ಗುರುತಿನ ಪುರಾವೆಯಾಗಿ ಪ್ರಮುಖ ದಾಖಲೆಯಾಗಿ ಬಳಸಬಹುದು. ಜನರು ಎರಡು ಅಥವಾ ಹೆಚ್ಚು ಪಡಿತರ ಚೀಟಿಗಳನ್ನು ಹೊಂದಿದ್ದಾರೆ ಮತ್ತು ಅವರು ವಿವಿಧ ಸ್ಥಳಗಳಿಂದ ಸಬ್ಸಿಡಿ ದರದಲ್ಲಿ ಪಡಿತರವನ್ನು ಸಂಗ್ರಹಿಸುತ್ತಾರೆ. ಬಿಳಿ ಕಾರ್ಡ್ ಹೊಂದಿರುವವರು ಮೊದಲು ತಮ್ಮ ಪಡಿತರ ಚೀಟಿಯನ್ನು ಡಿಜಿಟಲೀಕರಣಗೊಳಿಸಬೇಕು ಮತ್ತು ನಂತರ ಅವರು ತಮ್ಮ ಕಾರ್ಡ್ ಗಳನ್ನು ಆಧಾರ್ ನೊಂದಿಗೆ ಲಿಂಕ್ ಮಾಡಬಹುದು.

ಅಗತ್ಯ ವಿವರಗಳನ್ನು ನಮೂದಿಸಿ: ಆಧಾರ್ ಕಾರ್ಡ್ ಸಂಖ್ಯೆ, ಪಡಿತರ ಚೀಟಿ ಸಂಖ್ಯೆ ಮತ್ತು ನಿಮ್ಮ ನೋಂದಾಯಿತ ಮೊಬೈಲ್. 'ಮುಂದುವರಿಯಿರಿ' ಮೇಲೆ ಕ್ಲಿಕ್ ಮಾಡಿ.

ನಿಮ್ಮ ನೋಂದಾಯಿತ ಸಂಖ್ಯೆಗೆ ನೀವು ಒಟಿಪಿ ಸಂಖ್ಯೆಯನ್ನು ಸ್ವೀಕರಿಸುತ್ತೀರಿ: ಒಟಿಪಿಯನ್ನು ನಮೂದಿಸಿ ಮತ್ತು ನಿಮ್ಮ ಪಡಿತರ ಮತ್ತು ಆಧಾರ್ ಅನ್ನು ಲಿಂಕ್ ಮಾಡಿ. ಭಾರತದ ರಾಜ್ಯ ಸರ್ಕಾರವು ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಸಬ್ಸಿಡಿ ದರದಲ್ಲಿ ಆಹಾರ ಧಾನ್ಯಗಳನ್ನು ಖರೀದಿಸಲು ಅರ್ಹ ಜನರಿಗೆ ಪಡಿತರ ಚೀಟಿಗಳನ್ನು ನೀಡುತ್ತದೆ. ಅನೇಕ ಜನರಿಗೆ, ಪಡಿತರ ಚೀಟಿಗಳು ಗುರುತಿನ ಪುರಾವೆಯಾಗಿಯೂ ಕಾರ್ಯನಿರ್ವಹಿಸುತ್ತವೆ.

ವಿದ್ಯಾರ್ಥಿಗಳು, ಹಿರಿಯ ನಾಗರಿಕರಿಗೆ ಗುಡ್ ನ್ಯೂಸ್: ಜಂಗಲ್ ಲಾಡ್ಜ್ ನಲ್ಲಿ ರಿಯಾಯಿತಿ

» ಮೈಸೂರು

ಪ್ರವಾಸೋದ್ಯಮ ಇಲಾಖೆಯ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ ಬಳಕೆ ಹೆಚ್ಚಿಸುವ ಉದ್ದೇಶದಿಂದ ರಿಯಾಯಿತಿ ಪ್ಯಾಕೇಜ್ ಘೋಷಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.ಮೈಸೂರಿನಲ್ಲಿ ಮಾತನಾಡಿದ ಪ್ರವಾಸೋದ್ಯಮ ಸಚಿವ ಹೆಚ್.ಕೆ. ಪಾಟೀಲ್ ಅವರು, ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ ಬಳಕೆ ಹೆಚ್ಚಳ ಉದ್ದೇಶದಿಂದ ಹಿರಿಯ ನಾಗರಿಕರು, ಪಿಯುಸಿ, ಬಿಎ, ಬಿಎಸ್ಸಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ರಿಯಾಯಿತಿ ಪ್ಯಾಕೇಜ್ ನೀಡಲಾಗುವುದು ಎಂದು ತಿಳಿಸಿದ್ದಾರೆ. ಕೊರೋನಾದಿಂದಾಗಿ 2020 –21 ರಲ್ಲಿ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ ಗಳಿಂದ 61 ಕೋಟಿ ರೂ. ವ್ಯವಹಾರ ನಡೆದಿತ್ತು. 2022–23ರಲ್ಲಿ 111 ಕೋಟಿ ರೂ. ವ್ಯವಹಾರ ನಡೆದಿದೆ. ಪ್ರಸ್ತುತ ದಾಖಲಾತಿ ಶೇ. 47 ರಷ್ಟು ಇದ್ದು, ದಾಖಲಾತಿಯನ್ನು 2024 ರೊಳಗೆ ಶೇಕಡ 75 ಕ್ಕೆ ಹೆಚ್ಚಿಸುವ ಗುರಿ ಹೊಂದಲಾಗಿದೆ. ರೆಸಾರ್ಟ್ ದರ ಹೆಚ್ಚಾಗಿರುವುದಿರಂದ ವಿಶೇಷ ಪ್ಯಾಕೇಜ್ ನೀಡದ ಕಾರಣ ಬಳಕೆ ಪ್ರಮಾಣ ಕಡಿಮೆಯಾಗಿದ್ದು, ಹಿರಿಯ ನಾಗರಿಕರು, ವಿದ್ಯಾರ್ಥಿಗಳಿಗೆ ರಿಯಾಯಿತಿ ಪ್ಯಾಕೇಜ್ ಘೋಷಣೆ ಮಾಡಲು ನಿರ್ಧರಿಸಲಾಗಿದೆ ಎಂದು ಹೇಳಿದ್ದಾರೆ.

ಪೋಕ್ಸೋ ಕುರಿತು ಜಾಗೃತಿ ಕಾರ್ಯಗಾರ

» ಹೊಸದುರ್ಗ

ತಾಲೂಕು ಶಾಲಾ ಶಿಕ್ಷಣ ಇಲಾಖೆ ಹಾಗೂ ತಾಲೂಕು ಕಾನೂನು ಸೇವಾ ಸಮಿತಿ ವತಿಯಿಂದ ಪಟ್ಟಣದ ತೋಟದ ರಾಮಯ್ಯ ಗೌರಮ್ಮ ಬಾಲಕಿಯರ ಪ್ರಾಢಶಾಲೆ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಪೋಕ್ಸೊ ಕಾಯ್ದೆ ಜಾಗೃತಿ ಕುರಿತು ಪ್ರೌಢಶಾಲೆ ಮುಖ್ಯಶಿಕ್ಷಕರಿಗೆ ಕಾರ್ಯಾಗಾರ ನಡೆಯಿತು.

ಕಾರ್ಯಾಗಾರ ಉದ್ಘಾಟಿಸಿದ ಪಟ್ಟಣದ ಜೆಎಂಎಫ್ ಸಿ ನ್ಯಾಯಾಲಯದ ಹಿರಿಯ ಸಿವಿಲ್ ನ್ಯಾಯಾಧೀಶೆ ಎಂ.ಎಸ್.ಶಶಿಕಲಾ ಮಾತನಾಡಿ, ಮಕ್ಕಳಿಗೆ ಎಲ್.ಕೆ.ಜಿ ತರಗತಿಯಿಂದಲೇ ಗುಡ್ ಅಂಡ್ ಬ್ಯಾಡ್ ಟಚ್ ಬಗ್ಗೆ ಪೋಷಕರು ಹಾಗೂ ಶಿಕ್ಷಕರು ಅರಿವು ಮೂಡಿಸಬೇಕು. ಪೋಕ್ಸೊ ಕಾಯ್ದೆ ಬಗ್ಗೆ ಪೋಷಕರಿಗೂ ಜಾಗೃತಿ ಮೂಡಿಸಬೇಕು. ಬಾಲ್ಯದಲ್ಲಿಯೇ ಮದುವೆ ಮಾಡುವುದು ಶಿಕ್ಷಾರ್ಹ ಅಪರಾಧ ಎಂಬುದನ್ನು ಮನೆವರಿಕೆ ಮಾಡಿಕೊಡಬೇಕು. ಇತ್ತೀಚಿಗೆ ತಾಲೂಕಿನಲ್ಲಿ ಬೇಗನೆ ಮದುವೆ ಮಾಡುವುದು ಹೆಚ್ಚಾಗುತ್ತಿದೆ. ಒಂದು ತಪ್ಪನ್ನು ಮುಚ್ಚಲು ಹೋದರೆ ಇನ್ನೂ ಹೆಚ್ಚಿನ ತಪ್ಪುಗಳು ಆಗುತ್ತಿವೆ. ಇಂತಹ ಪರಿಸ್ಥಿತಿ ನಿಯಂತ್ರಿಸುವ ಬಗ್ಗೆ ತಾಲೂಕಿನ ಎಲ್ಲಾ ಶಾಲೆಯ ಮುಖ್ಯಶಿಕ್ಷಕರು ಹಾಗೂ ಸಹಶಿಕ್ಷಕರು ಸಹ ಕಾಳಜಿ ವಹಿಸಿ, ತಮ್ಮ ತಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು.

ಪೋಕ್ಸೊ ಪ್ರಕರಣ ನಿರ್ಮಾಣ ಆಗದಂತೆ ನೋಡಿಕೊಳ್ಳಲು ಮೊದಲಿಗೆ ನಮ್ಮ ಮನೆ ಹಾಗೂ ಶಾಲೆಯನ್ನು ಹೆಚ್ಚು ಸುರಕ್ಷತೆ ಮಾಡಿಕೊಳ್ಳಬೇಕು. ಕಾನೂನಿನ ಮುಂದೆ ಯಾರು ಬಲಿಷ್ಠರಾಗಲು ಸಾಧ್ಯವಿಲ್ಲ. ಹಳ್ಳಿಗಳಲ್ಲಿ ಭಯ ಸೃಷ್ಟಿಸುವವರಿಗೆ ಕಾನೂನಿನ ಅಡಿ ತಕ್ಕ ಶಿಕ್ಷೆ ಆಗಲಿದೆ. ಬಾಲ್ಯ ವಿವಾಹ ಹಾಗೂ ಪೋಕ್ಸೊ ಪ್ರಕರಣ ಕಂಡುಬಂದಲ್ಲಿ ತಕ್ಷಣವೇ ಉಚಿತ ಸಹಾಯವಾಣಿ 1098 ಸಂಖ್ಯೆಗೆ ಕರೆ ಮಾಡಿ. ಮಾಹಿತಿ ಕೊಟ್ಟವರ ಹೆಸರನ್ನು ಗೌಪ್ಯವಾಗಿ ಇಡಲಾಗುತ್ತಿದೆ. ಹಾಸ್ಟೆಲ್ ಹಾಗೂ ಶಾಲೆಗಳ ಬಾಲಕಿಯರ ರಕ್ಷಣೆ ಬಗ್ಗೆ ಈಗಾಗಲೇ ಪೊಲೀಸರಿಗೂ ತಿಳಿಸಲಾಗಿದೆ. ಅವರ ಕಾರ್ಯಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಸಲಹೆ ನೀಡಿದರು.

ತಾಲೂಕು ವಕೀಲರ ಸಂಘದ ಕಾರ್ಯದರ್ಶಿ ಜಿ.ಬಿ.ಬಸವಲಿಂಗಪ್ಪ ಅವರು ಪೋಕ್ಸೊ ಕಾಯ್ದೆ ಕುರಿತು ಮಾತನಾಡಿದರು.

ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಸೈಯದ್ ಮೋಸಿನ್, ಕ್ಷೇತ್ರ ಸಮನ್ವಯ ಅಧಿಕಾರಿ ಜಿ.ಕೆ.ಶ್ರೀನಿವಾಸ್, ಪ್ರೌಢಶಾಲೆ ಮುಖ್ಯಶಿಕ್ಷಕರ ಸಂಘದ ಜಿಲ್ಲಾ ಅಧ್ಯಕ್ಷ ಎಚ್.ನಾಗೇಂದ್ರಪ್ಪ, ತಾಲೂಕು ಅಧ್ಯಕ್ಷ ಶೇಖರಪ್ಪ, ಇಸಿಓ ಬಸವರಾಜ್ ಸೇರಿ ತಾಲೂಕಿನ ಎಲ್ಲಾ ಪ್ರೌಢಶಾಲೆಗಳ ಮುಖ್ಯಶಿಕ್ಷಕರು ಹಾಜರಿದ್ದರು.

ಮಣಿಪುರ ಮಹಿಳೆಯರ ಅವಮಾನ ಖಂಡಿಸಿ ಪ್ರತಿಭಟನೆ

» ಚಿತ್ರದುರ್ಗ

ಮಣಿಪುರದಲ್ಲಿ ಮಹಿಳೆಯರನ್ನು ವಿವಸ್ತ್ರಗೊಳಿಸಿ ಮೆರವಣಿಗೆ ನಡೆಸಿರುವುದರ ವಿರುದ್ಧ ಎಐಎಂಎಸ್‌ಎಸ್ ಮತ್ತು ಎಐಡಿವೈಓ ಸಂಘಟನೆಗಳು ಜಿಲ್ಲಾಧಿಕಾರಿಗಳ ವೃತ್ತದಲ್ಲಿ ಪ್ರತಿಭಟನೆ ನಡೆಸಿ ಮಣಿಪುರದಲ್ಲಿ ಆದಷ್ಟು ಬೇಗ ಶಾಂತಿಯನ್ನು ಪುನಃಸ್ಥಾಪಿಸಲು ಮತ್ತು ಮಹಿಳೆಯರ ಮೇಲೆ ದೌರ್ಜನ್ಯವೆಸಗಿದ ಅಪರಾಧಿಗಳಿಗೆ ಕಠಿಣ ಮತ್ತು ನಿದರ್ಶನೀಯ ಶಿಕ್ಷೆ ವಿಧಿಸಬೇಕೆಂದು ಆಗ್ರಹಿಸಲಾಯಿತು.

ಮಣಿಪುರದಲ್ಲಿ ಇಬ್ಬರು ಮಹಿಳೆಯರ ಮೇಲೆ ನಡೆದ ಅಮಾನವೀಯ ಮತ್ತು ಘೋರ ಘಟನೆಯನ್ನು ಅಲ್ ಇಂಡಿಯಾ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್ ಎಸ್) ಮತ್ತು ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಶನ್ (ಎಐಡಿವೈಓ) ಸಂಘಟನೆಗಳಿಯ ಉಗ್ರವಾಗಿ ಖಂಡಿಸುತ್ತವೆ. ಮಣಿಪುರ ಎರಡು ತಿಂಗಳಿಗಿಂತ ಹೆಚ್ಚು ಕಾಲ ಹೊತ್ತಿ ಉರಿಯುತ್ತಿದೆ, ಜನರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಮಹಿಳೆಯರು ಅತ್ಯಾಚಾರಕ್ಕೊಳಗಾಗುತ್ತಿದ್ದಾರೆ. ಮಕ್ಕಳು ಅನಾಥರಾಗುತ್ತಿದ್ದಾರೆ. ಆದರೆ ಶಾಂತಿ ಸ್ಥಾಪನೆಗಾಗಿ ಸರ್ಕಾರವು ಯಾವುದೇ ದಿಟ್ಟಕ್ರಮ ಕೈಗೊಂಡಿಲ್ಲ.ಕೋಮುವಾದಿ ಉದ್ರಿಕ್ತ ಪುಂಡರ ಗುಂಪೊಂದು ಇಬ್ಬರು ಮಹಿಳೆಯರನ್ನು ಬೆತ್ತಲೆಯಾಗಿಸಿ ಮೆರವಣಿಗೆ ಮಾಡಿದೆ.

ಈ ವೀಡಿಯೋ ನೋಡಿ ಮಾನವೀಯತೆ ಉಳಿದಿರುವ ದೇಶದ ಪ್ರತಿಯೊಬ್ಬ ಪ್ರಜೆಗೂ ನಾಚಿಕೆಯಾಗುವುದರ ಜೊತೆಗೆ ಆಕ್ರೋಶ ಬರುತ್ತಿದೆ.ಇಂತಹ ಸಂದರ್ಭದಲ್ಲಿ ಸಾರ್ವಜನಿಕರ ರಕ್ಷಣೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಜವಾಬ್ದಾರಿಯಾಗಿದೆ. ಆದರೆ ಈ ವಿಚಾರದಲ್ಲಿ ಎರಡೂ ಸರ್ಕಾರಗಳ ಮುಖ್ಯಸ್ಥರು ಮೌನವಾಗಿದ್ದಾರೆ. ಪ್ರಧಾನಿ ಯಾವುದೇ ಒಂದು ರಾಜ್ಯದವರಲ್ಲ,ಅವರು ಇಡೀ ದೇಶದವರು, ಇಡೀ ದೇಶದ ನಾಗರಿಕರ ಹಿತದೃಷ್ಟಿಯಿಂದ ಯೋಚಿಸುವುದು ಅವರ ಕರ್ತವ್ಯ. ಆದರೆ ಈ ಪ್ರಕರಣದಲ್ಲಿ ಅವರು ಹಾಗೆ ಮಾಡದೆ ಬರೋಬ್ಬರಿ ಇಂದಿನಗಳ ನಂತರ ಮೌನ ಮುರಿದಾಗ ಇಂತಹ ಗಂಭೀರ ವಿಚಾರದಲ್ಲೂ ರಾಜಕೀಯ ಮಾಡತೊಡಗಿದರು. ಇದನ್ನು ಕೂಡ ನಾವು ತೀವ್ರವಾಗಿ ಖಂಡಿಸುತ್ತೇವೆ ಎಂದರು.

ಅದೇ ಸಮಯದಲ್ಲಿ, ದೇಶದ ಜನತೆ ಎಲ್ಲಿದ್ದರೂ, ಯಾವುದೇ ಪರಿಸ್ಥಿತಿಯಲ್ಲಿದ್ದರೂ, ಈ ಅಮಾನವೀಯ ಘಟನೆಯನ್ನು ವಿರೋಧಿಸಬೇಕಿದೆ.. ಮಣಿಪುರದ ಜನತೆ ಯಾವುದೇ ಕೋಮುವಾದಿ ಎಚ್ಚಿದ್ರಕಾರಿ ಪ್ರಚೋದನೆಗೆ ಬಲಿಯಾಗದೆ ಕೋಮುದಳ್ಳುರಿಯಲ್ಲಿ ಬೇಯುತ್ತಿರುವ ರಾಜ್ಯದಲ್ಲಿ ಶಾಂತಿ ಸ್ಥಾಪನೆಗೆ ಮುಂದಾಗಬೇಕೆಂದು ಹಾಗೂ ಜನೈಕ್ಯತೆಯನ್ನು ಎತ್ತಿಹಿಡಿಯಬೇಕೆಂದು ಅಲ್ಲದೇ, ಮಣಿಪುರದಲ್ಲಿ ಆದಷ್ಟು ಬೇಗ ಶಾಂತಿಯನ್ನು ಪುನಃಸ್ಥಾಪಿಸಲು ಮತ್ತು ಮಹಿಳೆಯರ ಮೇಲೆ ದೌರ್ಜನ್ಯವೆಸಗಿದ ಅಪರಾಧಿಗಳಿಗೆ ಕಠಿಣ ಮತ್ತು ನಿದರ್ಶನೀಯ ಶಿಕ್ಷೆ ವಿಧಿಸಬೇಕೆಂದು ಆಗ್ರಹಿಸಿ ಎಐಎಂಎಸ್ ಎಸ್ ಮತ್ತು ಎಐಡಿವೈಓ ಸಂಘಟನೆಗಳಿಂದ ಇಂದು ಚಿತ್ರದುರ್ಗದಲ್ಲಿ ಪ್ರತಿಭಟನೆ ನಡೆಸಲಾಯಿತು.

ಈ ಪ್ರತಿಭಟನೆಯ ನೇತೃತ್ವವನ್ನು ಮುಖಂಡರಾದ ರವಿಕುಮಾರ್, ಸಂಚಾಲಕರಾದ ಕುಮುದ ಸುಜಾತ, ನಿಂಗರಾಜು, ಅರುಣ್, ಶಮಂತ್, ಗಿರಿಜಮ್ಮ, ಶ್ರೀದೇವಿ ವಹಿಸಿದ್ದರು.

ಮಾಡದಕೆರೆಯಲ್ಲಿ 27 ಮಿ.ಮೀ ಮಳೆ

» ಚಿತ್ರದುರ್ಗ

ಭಾನುವಾರ ಸುರಿದ ಮಳೆಯ ವಿವರದನ್ವಯ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಮಾಡದಕೆರೆಯಲ್ಲಿ 27 ಮಿ.ಮೀ ಮಳೆಯಾಗಿದ್ದು, ಇದು ಜಿಲ್ಲೆಯ ಅತ್ಯಧಿಕ ಮಳೆಯಾಗಿದೆ.

ಹೊಸದುರ್ಗ ತಾಲ್ಲೂಕಿನ ಹೊಸದುರ್ಗದಲ್ಲಿ 14.6 ಮಿ.ಮೀ, ಬಾಗೂರು 10.2 ಮಿ.ಮೀ, ಮತ್ತೋಡು 6.4 ಮಿ.ಮೀ, ಶ್ರೀರಾಂಪುರ 4 ಮಿ.ಮೀ ಮಳೆಯಾಗಿದೆ. ಚಿತ್ರದುರ್ಗ ತಾಲ್ಲೂಕಿನ ಚಿತ್ರದುರ್ಗ–1ರಲ್ಲಿ 16.2 ಮಿ.ಮೀ, ಚಿತ್ರದುರ್ಗ–2ರಲ್ಲಿ 10 ಮಿ.ಮೀ, ಐನಹಳ್ಳಿ 12.8 ಮಿ.ಮೀ, ಭರಮಸಾಗರ 14.4 ಮಿ.ಮೀ, ತುರುವನೂರು 10.6 ಮಿ.ಮೀ, ಸಿರಿಗೆರೆ 17.2 ಮಿ.ಮೀ, ಹಿರೇಗುಂಟನೂರು 4.1 ಮಿ.ಮೀ ಮಳೆಯಾಗಿದೆ. ಹಿರಿಯೂರು ತಾಲ್ಲೂಕಿನ ಹಿರಿಯೂರಿನಲ್ಲಿ 7 ಮಿ.ಮೀ, ಇಕ್ಕನೂರು 8.6 ಮಿ.ಮೀ, ಈಶ್ವರಗೆರೆ 8.8 ಮಿ.ಮೀ, ಬಬ್ಬೂರು 7.6 ಮಿ.ಮೀ, ಸುಗೂರು 2.1 ಮಿ.ಮೀ ಮಳೆಯಾಗಿದೆ. ಹೊಳಲ್ಕೆರೆ ತಾಲ್ಲೂಕಿನ ಹೊಳಲ್ಕೆರೆಯಲ್ಲಿ 16.4 ಮಿ.ಮೀ, ಚಿಕ್ಕಜಾಜೂರು 18.4 ಮಿ.ಮೀ, ಬಿ. ದುರ್ಗ 23 ಮಿ.ಮೀ, ಹೆಚ್‌ಡಿ ಪುರ 20.2 ಮಿ.ಮೀ, ತಾಳ್ಳ 12.4 ಮಿ.ಮೀ, ರಾಮಗಿರಿ 20 ಮಿ.ಮೀ ಮಳೆಯಾಗಿದೆ. ಚಳ್ಳಕೆರೆ ತಾಲ್ಲೂಕಿನ ಚಳ್ಳಕೆರೆಯಲ್ಲಿ 3.4 ಮಿ.ಮೀ, ಪರುಶುರಾಂಪುರ 12 ಮಿ.ಮೀ, ನಾಯಕನಹಟ್ಟಿ 6.6 ಮಿ.ಮೀ, ತಳಕು 2.2 ಮಿ.ಮೀ, ಡಿ. ಮರಿಕುಂಟೆ 8.2 ಮಳೆಯಾಗಿದೆ. ಮೊಳಕಾಲ್ಮೂರು ತಾಲ್ಲೂಕಿನ ಮೊಳಕಾಲ್ಮೂರುನಲ್ಲಿ 9.6 ಮಿ.ಮೀ, ರಾಯಾಪುರ 7.4 ಮಿ.ಮೀ, ಬಿಜಿಕೆರೆ 17 ಮಿ.ಮೀ, ರಾಂಪುರ 11.1 ಮಿ.ಮೀ, ದೇವಸಮುದ್ರ 11.3 ಮಿ.ಮೀ ಮಳೆಯಾಗಿದೆ. 21 ಮನೆಗಳು ಭಾಗಶಃ ಹಾನಿ: ಭಾನುವಾರ ಸುರಿದ ಮಳೆಗೆ ಜಿಲ್ಲಾಯಾದ್ಯಂತ ಒಟ್ಟು 21 ಮನೆಗಳು ಭಾಗಶಃ ಹಾನಿ ಹಾಗೂ 2 ಮನೆ ತೀವ್ರತರ ಹಾನಿಯಾಗಿದೆ. ಚಿತ್ರದುರ್ಗ ತಾಲ್ಲೂಕಿನಲ್ಲಿ 8 ಮನೆಗಳು ಭಾಗಶಃ ಹಾನಿಯಾಗಿದ್ದು, 2 ಮನೆ ತೀವ್ರತರ ಹಾನಿಯಾಗಿದೆ. ಚಳ್ಳಕೆರೆ ತಾಲ್ಲೂಕಿನಲ್ಲಿ 2 ಮನೆ ಭಾಗಶಃ ಹಾನಿಯಾಗಿದೆ. ಹೊಸದುರ್ಗ ತಾಲ್ಲೂಕಿನಲ್ಲಿ 1 ಮನೆ ಭಾಗಶಃ ಹಾನಿಯಾಗಿದೆ. ಹೊಳಲ್ಕೆರೆ ತಾಲ್ಲೂಕಿನಲ್ಲಿ 6 ಮನೆ ಭಾಗಶಃ ಹಾನಿಯಾಗಿದೆ. ಮೊಳಕಾಲ್ಮೂರು ತಾಲ್ಲೂಕಿನಲ್ಲಿ 4 ಮನೆ ಭಾಗಶಃ ಹಾನಿಯಾಗಿದೆ ಎಂದು ಜಿಲ್ಲಾಧಿಕಾರಿ ಕಚೇರಿ ಪ್ರಕಟಣೆ ತಿಳಿಸಿದೆ.

ಲೋಕಸಭೆಗೆ ಯಾರ ಜೊತೆ ಹೊಂದಾಣಿಕೆ ಇಲ್ಲ: ಹೆಚ್‌ಡಿಡಿ

» ಮೊದಲ ಪುಟದಿಂದ

ಬಿಜೆಪಿಯ ಬೆಂಬಲದೊಂದಿಗೆ ರಚನೆಯಾದ ದಿವಂಗತ ರಾಮಕೃಷ್ಣ ಹೆಗ್ಗಡೆಯವರ ಸರ್ಕಾರದಲ್ಲಿ ನಾನು ಲೋಕೋಪಯೋಗಿ ಸಚಿವನಾಗಿದ್ದೆ ಮತ್ತು ಸಿದ್ದರಾಮಯ್ಯ ಅವರು ಕಾವಲು ಸಮಿತಿ ಅಧ್ಯಕ್ಷರಾಗಿದ್ದರು. ಹಾಗಾಗಿ ರಾಜಕಾರಣದದಲ್ಲಿ ಯಾವಾಗ ಏನೇನಾಗಿದೆ ಎಂದು ಜಿ.ಟಿ. ದೇವೆಗೌಡ ಹೇಳಿದ್ದಾರೆ. 1983 ರಿಂದ ಇಂದಿನವರೆಗೂ ಜೆಡಿಎಸ್ ಅಸ್ತಿತ್ವದಲ್ಲಿದೆ. ನಾನು ಸಿಎಂ ಆದೆ, ಪ್ರಧಾನಿ ಕೂಡ ಆದೆ. ಕುಮಾರಸ್ವಾಮಿ ಅವರು ಕೂಡ ಸಿಎಂ ಆದರು. ಯಾರಾದ್ರು ನಾಳೆ ಬೆಳಗ್ಗೆ ಈ ಪಕ್ಷವನ್ನು ಅಳಿಸಿ ಹಾಕ್ತೇವಿ ಎಂದು ತಿಳಿದಿದ್ರೆ ಅದು ಅವರ ಭ್ರಮೆ ಎಂದು ಎಚ್‌ಡಿಡಿ ಗುಡುಗಿದರು.

ಸ್ವತಂತ್ರವಾಗಿ ಸ್ಪರ್ಧೆ ಮಾಡ್ತೀವಿ: ಮೈತ್ರಿಯ ಬಗ್ಗೆ ನಿಮಗೆ ಅನುಮಾನ ಬರುತ್ತೆ ನಿಜ, ನಾನು ಅದನ್ನು ನಿಮಗೆ ಬಿಡುತ್ತೇನೆ. ಹೆಗ್ಗಡೆಯವರು ಬಿಜೆಪಿಯ ಜೊತೆ ಸೇರಿ ಸಿಎಂ ಆಗಿಲ್ವೆ? ಕುಮಾರಸ್ವಾಮಿಯವರ ಬಗ್ಗೆ ಮಾ

ಶಿಕ್ಷಣಕ್ಕೆ ಮಾನವೀಯ ಮೌಲ್ಯ, ಸಂಸ್ಕಾರ ಕಲಿಸುವ ವಿಶೇಷ ಶಕ್ತಿಯಿದೆ: ಜಿಲ್ಲಾಧಿಕಾರಿ

» ಚಿತ್ರದುರ್ಗ

ಹತ್ತನೇ ತರಗತಿ ಫಲಿತಾಂಶದಲ್ಲಿ ಚಿತ್ರದುರ್ಗ ಜಿಲ್ಲೆ ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿರುವ ಕ್ರೆಡಿಟ್ ಎಲ್ಲಾ ಶಿಕ್ಷಕರಿಗೆ ಹೋಗಬೇಕು ಎಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಜಿ.ಆರ್.ಜೆ ಹೇಳಿದರು.

ನಗರದ ತರಾಸು ರಂಗ ಮಂದಿರದಲ್ಲಿ ಆಯೋಜಿಸಿದ್ದ ನೂರಕ್ಕೆ ನೂರರಷ್ಟು ಪಡೆದ ಶಾಲೆಯ ಮುಖ್ಯ ಶಿಕ್ಷಕರಿಗೆ ಸನ್ಮಾನ ಮತ್ತು ತಂತ್ರಜ್ಞಾನದ ಮೂಲಕ ಗಣಿತ ಬೋಧನೆ ಕಾರ್ಯಗಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಶಿಕ್ಷಣಕ್ಕೆ ತನ್ನದೇ ಆದಂತಹ ಶಕ್ತಿ ಇದೆ. ಎಲ್ಲಾರೂ ಶಿಕ್ಷಣ ಕ್ಷೇತ್ರದಲ್ಲಿ ಸಾಧನೆಯ ಕನಸು ಕಾಣಬೇಕು. ಹತ್ತನೇ ತರಗತಿಯ ಫಲಿತಾಂಶದ ಕ್ರೆಡಿಟ್ ಎಲ್ಲಾ ಶಿಕ್ಷಕರಿಗೂ ಹೋಗಬೇಕು. ಟೀಚಿಂಗ್ ಪ್ರೊಫೈಫೆಷನ್ ಅಲ್ಲ ಅದೊಂದು ಸೇವೆ. ಗುರುವಾಗಿ ಕೆಲಸ ಮಾಡ್ತೀವಿ ಅಂತಾ ಹೇಳ ಬಾರದು ಇದು ಒಂದು ಸಮಾಜಮುಖಿ ಸೇವೆಯಾಗಿದೆ.

ತಾಯಿ ತಂದೆ ಇಲ್ಲದೆ ಮಕ್ಕಳನ್ನು ಮಾರ್ಗದರ್ಶನ ಮಾಡಿ ಬೆಳೆಸುವ ಶಕ್ತಿ ಗುರುವಿಗೆ ಮಾತ್ರ ಇದೆ. ನಾವು ಮಾಡುವ ಕೆಲಸ ನಮ್ಮನ್ನು ಆಧರಿಸಿ ಮಾತಾ, ಪಿತ, ಗುರು ಆದ ನಂತರ ದೇವರು.ನಾನು ಈ ಸ್ಥಾನಕ್ಕೆ ಬಂದಿದ್ದೇನೆ ಎಂದರೆ ಅದಕ್ಕೆ ಕಾರಣ ನನ್ನ ಶಿಕ್ಷಕರು ಎಂದು ನೆನಪಿಸುಕೊಂಡರು.ಗುರು ಸ್ಥಾನ ಶ್ರೇಷ್ಠ ಹಾಗೂ ಮಹತ್ವ ಸ್ಥಾನವಾಗಿದೆ.ನಾನು ಐಎಎಸ್ ಮಾಡಿದ್ದೇನೆ ಅಂದರೆ ಅದಕ್ಕೆ ಕಾರಣ ನನ್ನ ಗುರು. ಒಂದನೇ ಕ್ಲಾಸ್ ಇದ್ದಾಗ ನನ್ನ ಗುರು ಹೇಳಿದ್ದರು. ನೀನು ಮುಂದೆ ಐಎಎಸ್ ಆಗುವ ಸಾಮರ್ಥ್ಯ ಇದೆ ಅಂಥ ಹೇಳಿದ್ದರು. ಆಗ ನನಗೆ ಐಎಎಸ್ ಅಂದ್ರೆ ಏನು ಅಂತಾ ಗೊತ್ತಿರಲಿಲ್ಲ.ಇಂದು ತುಂಬಾ ಚಾಲೆಂಜಸ್ ಇದೆ. ಶಿಕ್ಷಕರು ಮಕ್ಕಳಿಗೆ ಮನಸ್ಸು ಮುಟ್ಟುವಂತೆ ಪಾಠ ಮಾಡಬೇಕು. ಅದು ಶಿಕ್ಷಕರ ಮನಸ್ಸಿನಿಂದ ಬರಬೇಕು. ಎಲ್ಲಾರಿಗೂ ಬದುಕು ಕಟ್ಟಿಕೊಡುವವರು ಮತ್ತು ಹೇಳಿಕೋಡುದು ಶಿಕ್ಷಕರು. ಎಷ್ಟೇ ಉತ್ತಮ ಸ್ಥಾನಕ್ಕೆ ಹೋದರು ನಮ್ಮ ಗುರುಗಳಿಗೆ ನಮಸ್ಕಾರ ಮಾಡುವುದು ನಮ್ಮ ಸಂಸ್ಕಾರವಾಗಿದೆ.ಒಬ್ಬ ಸ್ಟೂಡೆಂಟ್ ಫೆಲಾದಾಗ ಮಾತ್ರ ಟೀಚರ್ ಗೆ ನೋವಾಗಬೇಕು. ನನ್ನ ಮಗು ಎನ್ನುವ ಫೀಲಿಂಗ್ ಇರಬೇಕು.ಒಬ್ಬ ಮಗು ಫೇಲಾದರೆ ಅದು ನನ್ನ ಸೋಲು ಎನ್ನುವ ಫೀಲಿಂಗ್ ಬರಬೇಕು.ಆ ರೀತಿಯಲ್ಲಿ ವೃತ್ತಿಯಲ್ಲಿ ಅವಕಾಶ ಸಿಕ್ಕಿರುವ ಎಲ್ಲಾ ಶಿಕ್ಷಕರು ತೊಡಗಿಕೊಳ್ಳಬೇಕು ಎಂದು ಶಿಕ್ಷಕರಿಗೆ ಕಿವಿಮಾತು ಹೇಳಿದರು.

ವಿಜಯನಗರ ಜಿಲ್ಲಾಧಿಕಾರಿ ಎಂ. ಎಸ್. ದಿವಾಕರ್ ಮಾತನಾಡಿ, ಎಲ್ಲಿ ಶಿಕ್ಷೆ ಇರುತ್ತೋ ಅಲ್ಲಿ ಪುರಸ್ಕಾರ ಕೂಡ ಇರುತ್ತೆ. ನಾನು ಮೂಲತ ಶಿಕ್ಷಕನ ಮಗ. ನಮ್ಮ ಕುಟುಂಬವೇ ಶಿಕ್ಷಕರ ಕುಟುಂಬ.ನಾನು ಹತ್ತನೇ ತರಗತಿ ಪರೀಕ್ಷೆ ಬರೆದಾಗ 22ನೇ ಸ್ಥಾನ ಇತ್ತು. ಅದೇ ಜಿಲ್ಲೆಯಲ್ಲಿ ಈಗ ಸಿಇಓ ಆಗಿದ್ದೇನೆ. ಈಗ ನಂಬರ್ ಒನ್ ಸ್ಥಾನ ಬಂದಿದೆ ಎಂದರೆ ನನಗಿಂತ ಖುಷಿ ಬೇರೆ ಯಾರಿಗೂ ಇಲ್ಲಾ ಎಂದರು. ಎಲ್ಲಾ ಸಾಧನೆಯಲ್ಲಿ ಯಶಸ್ಸು ಬೇಕು ಎಂದರೆ ಕಿವುಡ ನಾಗಬೇಕು.ಯಶಸ್ಸು ಬರತನಕ ಕಿವುಡನಾಗಬೇಕು, ಬಂದ ನಂತರ ಮೂಗ ನಾಗಬೇಕು. ಶಿಕ್ಷಣ ಬಹಳ ಮಹತ್ವದ್ದು.ಮಾನವೀಯ ಮೌಲ್ಯ, ಸಂಸ್ಕಾರ ಕಲಿಸಿಕೊಡಬೇಕು.

ಸರಕಾರಿ ಶಾಲೆ ನಮಗೆ ಸಂಸ್ಕಾರ ಕಲಿಸಿಕೊಡುತ್ತೆ.ಎಲ್ಲದರಲ್ಲೂ ಅನ್ವೇಷಣೆ ಆಗಿದೆ. ಆದರೆ ಶಿಕ್ಷಣದಲ್ಲಿ ಅನ್ವೇಷಣೆ ಇಲ್ಲ. ಶಿಕ್ಷಣ ಎಲ್ಲಾ ಕಾಲಕ್ಕೂ ಒಂದೇ. ಟೀಚರ್ ಅಂದ್ರೆ ಕೆಟ್ಟ ಚಟ ಇರಲ್ಲಾ. ಆಗ ಶಿಕ್ಷಕರು ಎಂದ್ರೆ ಹುಡುಕಿ ಹೆಣ್ಣು ಕೊಡುತ್ತಿದ್ದರು. ಈಗಿನವರು ಆತ್ಮವಲೋಕನ ಮಾಡಿಕೊಳ್ಳಬೇಕಿದೆ.ಶಿಕ್ಷಕರ ಮಕ್ಕಳು ಹೆಚ್ಚಿನ ಸಂಸ್ಕಾರ ಹೊಂದಿರುತ್ತಾರೆ. ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು. ಶಿಕ್ಷಕರುಗೊಂದಲಕ್ಕೆ ಒಳಗಾಗುತ್ತಿದ್ದಾರೆ.ಪ್ರತಿ ದಿನ ಶಿಕ್ಷಕರಿಗೆ ಗೌರವ ಕೊಡಬೇಕು.ಶಿಕ್ಷಣ, ಸಂಸ್ಕಾರ ಎಲ್ಲವೂ ನಿಮ್ಮ ಕೈಯಲ್ಲಿದೆ. ನಿಮ್ಮ ಆರೋಗ್ಯ ಕಾಪಾಡಿ ಕೊಳ್ಳಿ, ಶಿಕ್ಷಣದ ಆರೋಗ್ಯವೂ ಕಾಪಾಡುವ ಹೊಣೆ ಶಿಕ್ಷಕರ ಮೇಲಿದೆ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಡಿಡಿಪಿಐ ರವಿಶಂಕರ್ ರೆಡ್ಡಿ, ನೌಕರ ಜಿಲ್ಲಾಧ್ಯಕ್ಷ ಕೆ.ಟಿ.ತಿಮ್ಮಾರೆಡ್ಡಿ, ಕರ್ನಾಟಕ ಪರೀಕ್ಷಾ ಮಂಡಳಿ ನಿವೃತ್ತ ಕಾರ್ಯದರ್ಶಿ ರೇವಣಸಿದ್ದಪ್ಪ, ಡಯಟ್ ಪ್ರಾಂಶುಪಾಲರಾದ ಲೀಲಾವತಿ, ಶಿಕ್ಷಣ ಇಲಾಖೆಯ ನಜೀರುದ್ದಿನ್, ನಾಗರಾಜ್, ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಧಿಕಾರಿಗಳು ಮತ್ತು ಎಲ್ಲಾ ಪ್ರೌಢಶಾಲೆಯ ಮುಖ್ಯ ಶಿಕ್ಷಕರು ಭಾಗವಹಿಸಿದ್ದರು.

ಆಗಸ್ಟ್ 1 ರಿಂದ ನಂದಿನಿ ಹಾಲಿನ ದರ 3ರೂ ಹೆಚ್ಚಳ; ಭೀಮಾನಾಯ್ಕ್

» ಬಳ್ಳಾರಿ

ಆಗಸ್ಟ್ 1 ರಿಂದ ನಂದಿನಿ ಹಾಲಿನ ದರ 3 ರೂ ಹೆಚ್ಚಳವಾಗಲಿದೆ ಎಂದು ಕೆಎಂಎಫ್ (ಏಒಈ) ಅಧ್ಯಕ್ಷ ಭೀಮಾನಾಯ್ಕ್ ಸ್ಪಷ್ಟನೆ ನೀಡಿದ್ದಾರೆ.ಇಂದು ಸುದ್ದಿಗಾರರ ಜೊತೆ ಮಾತನಾಡಿದ ಅವರು ಸಿಎಂ ಸಿದ್ದರಾಮಯ್ಯ ನೇತೃತ್ವದ ಸಭೆಯಲ್ಲಿ ನಂದಿನಿ ಹಾಲಿನ ದರ 3 ರೂ ಹೆಚ್ಚಳ ಮಾಡಲು ನಿರ್ಧರಿಸಲಾಗಿದೆ.

ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಹಾಲಿನ ಬೆಲೆ ಹೆಚ್ಚಳಕ್ಕೆ ನಿರ್ಧರಿಸಲಾಗಿದೆ. ಆಗಸ್ಟ್ 1 ರಿಂದ ನೂತನ ದರ ಜಾರಿಗೆ ಬರಲಿದೆ ಎಂದರು.

ಇತ್ತೀಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಕೆಎಂಎಫ್ ಆಡಳಿತ ಮಂಡಳಿ ಸಭೆಯಲ್ಲಿ ನಂದಿನಿ ಹಾಲಿನ ದರವನ್ನು ಪ್ರತಿ ಲೀಟರ್ ಗೆ ಮೂರು ರೂಪಾಯಿ ಹೆಚ್ಚಳ ಮಾಡಲು ತೀರ್ಮಾನ ಕೈಗೊಳ್ಳಲಾಗಿದೆ. ಆಗಸ್ಟ್ 1 ರಿಂದ ನಂದಿನಿ ಹಾಲಿನ ದರ ಹೆಚ್ಚಳ ಜಾರಿಗೆ ಬರಲಿದೆ.

ಯಾವುದಕ್ಕೆ ಎಷ್ಟು ದರ ಎಂಬ ಮಾಹಿತಿಯನ್ನು ನೋಡುವುದಾದರೆ, ಹೋಮೋಜಿನೈಸ್ಟ್ ಟೋನ್ಡ್ ಹಾಲು 40 ರೂ ದಿಂದ 43 ರೂ. ಶುಭಂ ಹಾಲು 45 ರೂ ದಿಂದ 48 ರೂ. ಮೊಸರು– 47– 50 ರೂ. ಟೋನ್ಡ್ ಹಾಲು– 39 ರೂದಿಂದ 42 ರೂ. ಶುಭಂ ಹಾಲು (ಹಸಿರು)– 45 ರೂದಿಂದ 48 ರೂ. ಸ್ಪೆಷಲ್ ಹಾಲು (ಆರೆಂಜ್) 45 ರೂ ದಿಂದ 48 ರೂ. ಸಮೃದ್ಧಿ ಹಾಲು 50 ರೂ ದಿಂದ 53 ರೂ. ಸಂತೃಪ್ತಿ ಹಾಲು 52 ರೂ ದಿಂದ 55 ರೂ. ಆಗಿದೆ.

ಪ್ರಕೃತಿ ಸದಾ ಹಚ್ಚ ಹಸಿರಿನಿಂದ ಕೂಡಿರಬೇಕಾದರೆ ಪ್ರತಿಯೊಬ್ಬರು ಸಸಿ ನೆಟ್ಟು ಪೋಷಿಸಿ: ಮೋಕ್ಷ

» ಚಿತ್ರದುರ್ಗ

ಹೊಳಲ್ಕೆರೆ ರಸ್ತೆಯಲ್ಲಿರುವ ದವಳಗಿರಿ ಉದ್ಯಾನವನದಲ್ಲಿ ಇನ್ನರ್‌ವೀಲ್ ಕ್ಲಬ್ ಚಿತ್ರದುರ್ಗ ಹಾಗೂ ದವಳಗಿರಿ ಬಡಾವಣೆ ನಿವಾಸಿಗಳಿಂದ ಭಾನುವಾರ ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಇನ್ನರ್‌ವೀಲ್ ಕ್ಲಬ್ ಅಧ್ಯಕ್ಷೆ ಶ್ರೀಮತಿ ಮೋಕ್ಷರುದ್ರಸ್ವಾಮಿ ಗಿಡ ನೆಟ್ಟು ಮಾತನಾಡುತ್ತ ಪ್ರಕೃತಿ ಸದಾ ಹಚ್ಚಹಸಿರಿನಿಂದಕೂಡಿರಬೇಕಾದರೆ ಪ್ರತಿಯೊಬ್ಬರು ಸಸಿ ನೆಟ್ಟು ಪೋಷಿಸಿ ದೊಡ್ಡ ಮರವನ್ನಾಗಿ ಬೆಳೆಸಬೇಕಿದೆ. ಉದ್ಯಾನವನ, ಖಾಲಿ ನಿವೇಶನ, ರಸ್ತೆ ಬದಿ ಹಾಗೂ ಎಲ್ಲೆಲ್ಲಿ ಜಾಗವಿದೆಯೋ ಅಲ್ಲೆಲ್ಲಾ ಗಿಡಗಳನ್ನು ನೆಡುವ ಜಾಗೃತಿ ಎಲ್ಲರಲ್ಲಿಯೂ ಮೂಡಿಸಬೇಕಿದೆ ಎಂದು ಹೇಳಿದರು.

ಮಾನವನ ಅತಿಯಾಸೆಗೆ ಕಾಡು ನಾಶವಾಗುತ್ತಿರುವುದರಿಂದ ಕಾಡುಪ್ರಾಣಿಗಳು ಊರಿನೊಳಗೆ ಬರುತ್ತಿವೆ. ಮಾನವ ಹಾಗೂ ಕಾಡುಪ್ರಾಣಿಗಳ ನಡುವಿನ ಸಂಘರ್ಷ ನಿಲ್ಲಬೇಕಾದರೆ ಪರಿಸರವನ್ನು ಕಾಪಾಡಬೇಕು. ಗಿಡ ನೆಡುವುದು ಮುಖ್ಯವಲ್ಲ. ನೆಟ್ಟ ಗಿಡಗಳು ದೊಡ್ಡ ಮರವಾಗುವತನಕ ಪೋಷಿಸಿದಾಗ ಎಲ್ಲರಿಗೂ ನೆರಳು ಹಾಗೂ ಉಸಿರಾಟಕ್ಕೆ ಶುದ್ದವಾದ ಗಾಳಿ ಸಿಗುತ್ತದೆ ಎಂದು ಗಿಡ–ಮರಗಳ ಮಹತ್ವ ತಿಳಿಸಿದರು.

ಇನ್ನರ್‌ವೀಲ್ ಕ್ಲಬ್‌ನ ಕಾರ್ಯದರ್ಶಿ ರೇಷ್ಮಖಾನಂ, ವೀಣಸ್ವಾಮಿ, ಸರಸ್ವತಿ, ದವಳಗಿರಿ ಬಡಾವಣೆಯ ಸಿ.ಜಿ.ಶ್ರೀನಿವಾಸ್, ಎಲ್.ಷಣ್ಮುಖ, ಜೆ.ಎಸ್. ಗುರುಮೂರ್ತಿ, ಈಶ್ವರಪ್ಪ, ಹೊರಕೆ ರಂಗಣ್ಣ, ನ್ಯಾಯವಾದಿ ಅನಿಲ್‌ಕುಮಾರ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಡಿ.ರಮೇಶ್, ಪರಮೇಶ್ವರಪ್ಪ, ಜಯಣ್ಣ, ಸಿ.ಚನ್ನಕೇಶವ, ಕುಮಾರಪ್ಪ, ಕೃಷ್ಣಪ್ಪ, ಜಗದೀಶ್, ಮಂಜಣ್ಣ, ಕೆ.ಟಿ.ಶಾಂತಸ್ವಾಮಿ, ಓ.ಬಿ.ಬಸವರಾಜ್, ರಾಘವೇಂದ್ರ, ಶಂಕರಣ್ಣ, ನಿವೃತ್ತ ಶಿಕ್ಷಕ ಜಯರಂಗಣ್ಣ, ಬಿ.ಎಸ್. ರಾಮಚಂದ್ರರಾವ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಬೀಡಾಡಿ ದನಗಳ ರಕ್ಷಣೆ ಮಾಡುವಂತೆ ಬಜರಂಗದಳ ಆಗ್ರಹ

» ಚಿತ್ರದುರ್ಗ

ಚಿತ್ರದುರ್ಗ ನಗರದಲ್ಲಿ ಬೀದಿ ಬೀದಿಗಳಲ್ಲಿ ಓಡಾಡುತ್ತಿರುವ ಗೋವುಗಳ ರಕ್ಷಣೆ ಮಾಡುವಂತೆ ಆಗ್ರಹಿಸಿ ವಿಶ್ವ ಹಿಂದೂ ಪರಿಷತ್ ಬಜರಂಗದಳ ನಗರಸಭೆಯ ಪೌರಾಯುಕ್ತರಿಗೆ ಮನವಿ ಮಾಡಿದೆ.

ವಿಶ್ವ ಹಿಂದೂ ಪರಿಷತ್–ಬಜರಂಗದಳ ವತಿಯಿಂದ ಚಿತ್ರದುರ್ಗ ನಗರದಲ್ಲಿ ಬೀದಿ ಬೀದಿಗಳಲ್ಲಿ ಓಡಾಡುತ್ತಿರುವ ಮತ್ತು ಬೀದಿ ಬೀದಿಗಳಲ್ಲಿ ಮಲಗಿರುವ ಗೋವುಗಳ ರಕ್ಷಣೆ ಮತ್ತು ಅವುಗಳ ಸಂರಕ್ಷಣೆ ಮಾಡುವ ಜವಾಬ್ದಾರಿಯನ್ನು ನಗರಭೆಯ ವತಿಯಿಂದ ರಕ್ಷಿಸಿ ಗೋ ಮಾಲೀಕರಿಗೆ ಒಪ್ಪಿಸಿ, ಮಾಲೀಕರುಗಳು ಸಿಗದಿದ್ದ ಪಕ್ಷದಲ್ಲಿ ಗೋಶಾಲೆಗೆ ಕಳುಹಿಸುವ ವ್ಯವಸ್ಥೆಯನ್ನು ಮಾಡಬೇಕು. ಮತ್ತು ಗೋವುಗಳನ್ನು ರಕ್ಷಣೆ ಮಾಡುವುದು ನಮ್ಮ–ನಿಮ್ಮ ಆದ್ಯ ಕರ್ತವ್ಯವವಾಗಿರುತ್ತದೆ. ಗೋವುಗಳು, ಚಿತ್ರದುರ್ಗ ನಗರದಲ್ಲಿ ಎಲ್ಲಿ ಬೇಕೆಂದರಲ್ಲಿ ನಡು ರಸ್ತೆಯ ಬದಿಯಲ್ಲಿ ಮಲಗುವುದು ಮತ್ತು ಓಡಾಡು ಮಾಡುತ್ತಿರುವುದರಿಂದ ವಾಹನ ಚಾಲಕರಿಗೆ, ಓಡಾಡುವವರಿಗೆ ತೊಂದರೆಯಾಗಿರುತ್ತದೆ. ತಾವುಗಳು ದಯಮಾಡಿ ತುರ್ತಾಗಿ : ಗೋವುಗಳನ್ನು ರಕ್ಷಣೆ ಗೋವುಗಳ ಮಾಲೀಕರಿಗೆ ಅಥವಾ ಗೋಶಾಲೆಗೆ ಬಿಡುವಂತೆ ವ್ಯವಸ್ಥೆ ಮಾಡಬೇಕೆಂದು ಮನವಿ ಮಾಡಿದ್ದಾರೆ.

ನಗರ ಗೋರಕ್ಷ ಪ್ರಮುಖ ಕಿಶೋರ್, ರಂಗನಾಥ್, ತಿಪ್ಪೇಶ್, ಗೌತಮ್ಮ ಸೇರಿದಂತೆ ಇತರರು ಭಾಗವಹಿಸಿದ್ದರು.

ಪ್ರಮುಖ ಸುದ್ದಿ

ಬಹುತೇಕ ಎಲ್ಲಾ ಜಿಲ್ಲೆಯಲ್ಲಿ 28ರ ವರೆಗೆ ಮಳೆ ಆರ್ಭಟ

» ಬೆಂಗಳೂರು

ಕರ್ನಾಟಕ ರಾಜ್ಯಾದ್ಯಂತ ಸಕ್ರಿಯಗೊಂಡಿರುವ ಮುಂಗಾರು ಮಳೆ ಮುಂದಿನ ಜುಲೈ 28ರವರೆಗೂ ಕರಾವಳಿ, ದಕ್ಷಿಣ ಮತ್ತು ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಮುಂದುವರಿಯಲಿದೆ. ವಿವಿಧ ಜಿಲ್ಲೆಗಳು ಎಂದಿನಂತೆ ಆರೆಂಜ್ ಮತ್ತು ಯೆಲ್ಲೋ ಅಲರ್ಟ್ ಪಡೆದಿವೆ.

ಹಗಲಿರುಳು ಎನ್ನದೇ ಬಿಟ್ಟು ಬಿಟದೇ ಸುರಿಯುತ್ತಿರುವ ವರ್ಷಧಾರೆ ಇನ್ನೂ ಹಲವು ದಿನಗಳು ರಾಜ್ಯದ ಮೂರು ಭಾಗಗಳಲ್ಲಿಯೂ ಮುಂದುವರಿಯಲಿದೆ. ಈಗಾಗಲೇ ಕರಾವಳಿ ಉಡುಪಿ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಹಾಗೂ ಉತ್ತರ ಒಳನಡಿನ ಬೆಳಗಾವಿ, ಹಾವೇರಿ, ಧಾರವಾಡ, ವಿಜಯಪುರ, ಗದಗ, ಕೊಪ್ಪಳ, ಬೀದರ್, ಕಲಬುರಗಿಯಲ್ಲಿ ಸತತ ಕೆಲವು ದಿನಗಳಿಂದ ಅತ್ಯಧಿಕ ಮಳೆ ದಾಖಲಾಗಿದೆ. ಸದ್ಯಕ್ಕೆ ಈ ಮಹಾ ಮಳೆ ವಿಶ್ರಾಂತಿ ನೀಡುವ ಲಕ್ಷಣಗಳು ಕಂಡು ಬಂದಿಲ್ಲ.

ಕರ್ನಾಟಕ ಕರಾವಳಿಯ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಒಳನಾಡಿನ ಜಿಲ್ಲೆಗಳಾದ ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಕೊಪ್ಪಳ, ಕಲಬುರಗಿ, ವಿಜಯಪುರ, ಯಾದಗಿರಿ ಹಾಗೂ ದಕ್ಷಿಣ ಒಳನಾಡಿನ ಬಳ್ಳಾರಿ, ಚಿಕ್ಕಮಗಳೂರು, ಹಾಸನ, ಕೊಡಗು, ಶಿವಮೊಗ್ಗ ಜಿಲ್ಲೆಗಳಲ್ಲಿ ಜುಲೈ 28ರವರೆಗೂ ಭಾರೀ ಮತ್ತು ಕೆಲವೊಮ್ಮೆ ಅತ್ಯಧಿಕ ಮಳೆ ಆಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ನಿರಂತರ 24 ಫಿ 7 ಮಳೆ ಸುರಿಯುತ್ತಿದೆ: ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಉಳಿದಂತೆ ಚಿತ್ರದುರ್ಗ, ದಾವಣಗೆರೆ, ಕೋಲಾರ, ಹಾಸನ, ರಾಯಚೂರು, ಹಾವೇರಿ, ಗದಗ, ಕಲಬುರಗಿ, ಬೀದರ್ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ನೀಡಲಾಗಿದೆ. ಈ ಜಿಲ್ಲೆಗಳಲ್ಲಿ ದಿನ ಬಿಟ್ಟು ದಿನ ಧಾರಾಕಾರವಾಗಿ ಮಳೆ ಸುರಿಯಲಿದೆ. ಕಳೆದ ಹಲವು ದಿನಗಳಿಂದ ಮೋಡ ಕವಿದ ಮಬ್ಬು ವಾತಾವರಣ ಕಂಡು ಬಂದಿದ್ದು, ಬಿಸಿಲಿನ ದರ್ಶನವೇ ಅಪರೂಪವಾಗಿದೆ. ಕರಾವಳಿ ಮತ್ತು ಉತ್ತರ ಕರ್ನಾಟಕಲ್ಲಿ ನಿರಂತರವಾಗಿ ಮಳೆ ಸುರಿಯುತ್ತಿದೆ.

ಕರಾವಳಿಯ ಸಮುದ್ರ ತೀರದಲ್ಲಿ ಗಾಳಿಯು ಪ್ರತಿ ಗಂಟೆಗೆ 40 ರಿಂದ 45 ಕಿಲೋ ಮೀಟರ್ ವೇಗದಲ್ಲಿ ಬೀಸಲಿದೆ. ಈ ಸಂಬಂಧ ಮೀನುಗಾರಿಕೆಗೆ ಇಳಿಯದಂತೆ ಮೀನುಗಾರರಿಗೆ ಐಎಂಡಿ ಎಚ್ಚರಿಕೆ ನೀಡಿದೆ. ಕೆಲವೊಮ್ಮೆ ಈ ಭಾಗದಲ್ಲಿ ಗಂಟೆಗೆ 55 ಕಿಲೋ ಮೀಟರ್ ವೇಗದಲ್ಲಿ ಗಾಳಿ ಬೀಸಲಿದೆ ಎಂದು ಹವಾಮಾನ ತಜ್ಞರು ಮಾಹಿತಿ ನೀಡಿದ್ದಾರೆ.

ನೆನ್ನೆ ಅನೇಕ ಕಡೆಗಳಲ್ಲಿ ಭಾರೀ ಮಳೆ: ವಿವರ: ರಾಜ್ಯದಲ್ಲಿ ಕಳೆದ 24 ಗಂಟೆಯಲ್ಲಿ ದಕ್ಷಿಣ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆ ವ್ಯಾಪ್ತಿಯಲ್ಲಿ ಅತ್ಯಧಿಕ ಮಳೆ (17 ಸೆಂ.ಮೀ) ದಾಖಲಾಗಿದೆ. ಇದರೊಂದಿಗೆ ಸುಬ್ರಹ್ಮಣ್ಯ, ಕೋಟಾ, ಉಪ್ಪಿನಂಗಡಿ, ಮಂಗಳೂರು ವಿಮಾನ ನಿಲ್ದಾಣ, ಧರ್ಮಸ್ಥಳ, ಪುತ್ತೂರು, ಲಿಂಗಮನಕ್ಕಿ, ಪೆಣಂಬೂರು, ಸಿದ್ದಾಪುರ, ನಾಪೋಕ್ಲು, ಕುಮಟಾ, ತಾಳಗುಪ್ಪ, ಲೊಂಡಾ, ಗೋಕರ್ಣ, ಶಿವಮೊಗ್ಗ, ಚಿತ್ರದುರ್ಗ, ಧಾರವಾಡ, ಬೆಳಗಾವಿ, ವಿಜಯನಗರ, ಹಾಸನ, ತುಮಕೂರು, ಬೆಂಗಳೂರು ನಗರ ಜಿಲ್ಲೆಗಳಲ್ಲಿ ಮಳೆ ಬಿದ್ದಿದೆ.

ಫಾಸ್ಟ್ ನ್ಯೂಸ್

ಮನ್ಮುಲ್ ಅಧ್ಯಕ್ಷರಾಗಿ ಬೋರೇಗೌಡ ಆಯ್ಕೆ

» ಮಂಡ್ಯ

ಅಂತೂ ಇಂದು ತೀವ್ರ ಕುತೂಹಲ ಕೆರಳಿಸಿದ್ದಂತ ಮನ್ಮುಲ್ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ನ ಬೋರೇಗೌಡ ಅವರು ಆಯ್ಕೆಯಾಗಿದ್ದಾರೆ. ಈ ಮೂಲಕ ಮನ್ಮುಲ್ ಅಧ್ಯಕ್ಷಗಾದಿ ಹಿಡಿಯುವಲ್ಲಿ ಕಾಂಗ್ರೆಸ್ ಯಶಸ್ವಿಯಾಗಿದೆ. ಇಂದು ಮಂಡ್ಯ ಜಿಲ್ಲೆ ಗೆಜ್ಜಲಗೆರೆಯಲ್ಲಿರುವ ಮನ್ಮುಲ್ ಮನ್ಮುಲ್ ನ ಅಧ್ಯಕ್ಷ ಸ್ಥಾನಕ್ಕಾಗಿ ಚುನಾವಣೆ ನಡೆಯಿತು. ಈ ಚುನಾವಣೆಯಲ್ಲಿ ಕಾಂಗ್ರೆಸ್ ತಂತ್ರಗಾರಿಕೆ ವರ್ಕೌಟ್ ಆಗಿದೆ. ಹೀಗಾಗಿ ಮನ್ಮುಲ್ ಅಧ್ಯಕ್ಷ ಸ್ಥಾನ ಕಾಂಗ್ರೆಸ್ ತೆಕ್ಕೆಗೆ ಸೇರಿದೆ. ಮನ್ಮುಲ್ ಅಧ್ಯಕ್ಷರಾಗಿ ಕಾಂಗ್ರೆಸ್ ನ ಬಿ.ಬೋರೇಗೌಡ ಅವರು ಆಯ್ಕೆಯಾಗಿದ್ದಾರೆ. ಈ ಬಗ್ಗೆ ಅಧಿಕೃತ ಘೋಷಣೆಯಷ್ಟೇ ಬಾಕಿ ಇದೆ. ಬಿಜೆಪಿ ಬೆಂಬಲಿತ ನಿರ್ದೇಶಕ ಎಸ್.ಪಿ.ಸ್ವಾಮಿಯನ್ನ ಸೆಳೆಯುವಲ್ಲಿ ಕಾಂಗ್ರೆಸ್ ಯಶಸ್ವಿಯಾದ ನಂತ್ರ, ಬೋರೇಗೌಡ ಅವರು ಅಧ್ಯಕ್ಷರ